ಜ್ಯೋತಿಕಾರ್ಯದ ವಾರ್ತಾಪತ್ರ



ಮಹರ್ಷಿ ಅಮರ (1919-1982)

**ಋಷಿಗಳು ಹೇಳಿಕೊಟ್ಟಂತೆ**
**ನಾವು ಧ್ಯಾನವನ್ನು ಕಲಿಸುತ್ತೇವೆ.**

### ಬೆಳಕು
ಈ ಎಲ್ಲ ಸೃಷ್ಟಿಯ ಹಿಂದಿರುವ ಮಹಾನ್ ಶಕ್ತಿ. ಬೆಳಕು ಸಾಕ್ಷಾತ್ ದೇವರು.

### ಜ್ಯೋತಿಕಾರ್ಯ
ಎಲ್ಲ ಜೀವಜಾಲಕ್ಕೆ ತನ್ನ ಅರಿವು ಮತ್ತು ಅನುಭವಗಳ ಮಟ್ಟವನ್ನು ಮೇಲೇರಿಸಿ ಉತ್ತಮವಾಗಿ ಬದುಕಲು ನೆರವಾಗುವುದು.

### ಜ್ಯೋತಿಜೀವಿಗಳು
ಇಲ್ಲಿ ಮತ್ತು ಮೇಲಿನ ಲೋಕಗಳಲ್ಲಿ ಜೀವಿಸುತ್ತ, ಜ್ಞಾನ ಮತ್ತು ಚೈತನ್ಯಗಳ ಬೆಳಕನ್ನು ಸಂಗ್ರಹಿಸಿ ಹರಡುತ್ತಿರುವ ಋಷಿಗಳು.

### ಸಪ್ತಋಷಿಗಳು
ಎಲ್ಲ ಜೀವಜಾಲಕ್ಕೆ ಇಲ್ಲಿ ಶಾಂತಿ ಪರಿಪೂರ್ಣತೆಗಳೊಂದಿಗೆ ಜೀವಿಸುವ ದಾರಿ ತೋರಿಸಿ, ಕೊನೆಗೆ ತಮ್ಮ ಮೂಲವಾದ ಬೆಳಕಿಗೆ ಮಾರ್ಗದರ್ಶಿಸಲು ಆಯ್ಕೆಗೊಂಡಿರುವ ಮಹಾತ್ಮರು.

### ಮಹರ್ಷಿ ಅಮರ
ಸಪ್ತಋಷಿಗಳೊಂದಿಗೆ ನೇರಸಂಪರ್ಕವಿದ್ದ, ಹೊಸ ಯುಗದ ಉನ್ನತಬದುಕಿಗೆ ಅಗತ್ಯವಾದ ಜ್ಞಾನ ಮತ್ತು ಸೂಚನೆಗಳನ್ನು ಕೆಳತಂದ ಒಬ್ಬ ಮಹಾನ್ ಗುರುವಾಗಿದ್ದರು.

### ಗುರೂಜಿ ಕೃಷ್ಣಾನಂದ
ಮಹರ್ಷಿ ಅಮರರ ನೇರ ಶಿಷ್ಯರು. ಅವರು ಋಷಿಗಳ ಮಾರ್ಗವಾದ ಧ್ಯಾನಯೋಗವನ್ನು ಬೆಳೆಸಿ, ತಪೋನಗರದಲ್ಲಿ ಸಪ್ತಋಷಿಗಳ ಆಧ್ಯಾತ್ಮಿಕ ಕೇಂದ್ರವನ್ನು ಸ್ಥಾಪಿಸಿದರು.

### ಸಪ್ತಋಷಿ ಧ್ಯಾನಯೋಗ
ಋಷಿಗಳ ಮಾರ್ಗದರ್ಶನದಲ್ಲಿ ರೂಪುಗೊಂಡಿರುವ, ಧ್ಯಾನ ಮತ್ತು ನಮ್ಮ ಭಾವನೆ-ಆಲೋಚನೆಗಳನ್ನು ಉತ್ತಮಗೊಳಿಸಿಕೊಳ್ಳುವ ಮೂಲಕ ನಮ್ಮ ಲೌಕಿಕ ಮತ್ತು ಆಧ್ಯಾತ್ಮಿಕ ಬದುಕುಗಳನ್ನು ಸಮರ್ಪಕವಾಗಿ ಜೀವಿಸಲು ನೆರವಾಗುವ ಒಂದು ವಿನೂತನ ಆಧ್ಯಾತ್ಮಿಕ ಮಾರ್ಗ.

### ಪ್ರಮಾಣಗಳು
★ ನಾವೆಲ್ಲರೂ ಒಂದು ಮಹಾ ಜ್ಯೋತಿಯ (ದೇವರ) ಕಣಗಳು.
★ ಪ್ರೀತಿ ನಮ್ಮ ಸ್ವಭಾವ.
★ ಮೌನ ನಮ್ಮ ಭಾಷೆ.
★ ಧ್ಯಾನ ನಮ್ಮ ಮಾರ್ಗ.
★ ಈ ಪ್ರಪಂಚ ನಮ್ಮ ಆಶ್ರಮ.
★ ಇಡೀ ಸೃಷ್ಟಿಯೇ ನಮ್ಮ ಕುಟುಂಬ.

# ತಪೋವಾಣಿ

ಸಂಪುಟ 15 ಸಂಚಿಕೆ 11 ನವೆಂಬರ್ 2018 ರೂ.25

## ಅನಿಸಿಕೆಗಳು

**ಗುರೂಜಿ ಕೃಷ್ಣಾನಂದ**
**ಅನು: ಚಂಪಾ**
(ಹಿಂದಿನ ವಾರ್ತಾಪತ್ರಗಳಿಂದ ಆಯ್ದ ಭಾಗಗಳು – ನವೆಂಬರ್ 1995ರ ಸಂಚಿಕೆ)

ಕೆನ್ ಸರೋ ವೈವಾರನ್ನು ಗಲ್ಲಿಗೇರಿಸಲಾಯಿತು. ಪ್ರತಿದಿನ ನೂರಾರು ಜನರ ಪ್ರಾಣಹರಣವಾಗುತ್ತಿದೆ, ಜನರು ಅತ್ಯಾಚಾರ ಹಾಗೂ ಹಿಂಸಾಚಾರಕ್ಕೊಳಗಾಗುತ್ತಿದ್ದಾರೆ. ಮನುಷ್ಯನಿಂದ ಮನುಷ್ಯನಿಗೆ ಅನ್ಯಾಯ, ಕ್ರೌರ್ಯ ಮತ್ತು ಅಪ್ರೇಮ. ಕಾಣದ ನನ್ನ ಕಣ್ಣೀರು ನನ್ನ ಭಾವನೆಯನ್ನು, ಅಸಹಾಯಕತೆಯನ್ನು ವ್ಯಕ್ತಪಡಿಸಲಾರವು. 1995ರ ಕೆಂಪು ಸೂರ್ಯ ಕೆಂಪಾದ ದಿಗಂತದಲ್ಲಿ ಕೆಂಪು ನೀರಿನೊಳಗೆ ಇಳಿಯುತ್ತಿದ್ದಾನೆ. ಹಳೆಯ ವರ್ಷಕ್ಕೆ ಒಂದು ನಿಟ್ಟುಸಿರಿನೊಂದಿಗೆ ಹೊಸ ವರ್ಷದ ನಿರೀಕ್ಷೆ. ಹೊಸ ವರ್ಷದ ಮಡಿಲಲ್ಲಿ ಏನೇ ಇದ್ದರೂ ಅದನ್ನು ನಾವು ಸ್ವಾಗತಿಸೋಣ.

1995ರಲ್ಲಿ ಎಲ್ಲವೂ ರಕ್ತಮಯವಾಗಿರಲಿಲ್ಲ. ಅಲ್ಲಿ ಬೆಳಕೂ ಇತ್ತು. ಕೆಲವರು ಶಾಂತಿಗಾಗಿ ಹೋರಾಡಿ ಸತ್ತರು. ಬೆಳಕು ಮತ್ತು ಜೀವನದ ಬಗ್ಗೆ ಹೆಚ್ಚಿನ ಅರಿವಿತ್ತು. ಇವುಗಳೊಂದಿಗೆ ನಾವು ಇನ್ನೂ ಹೆಚ್ಚಿನ ಶಾಂತಿ ಮತ್ತು ಬೆಳಕನ್ನು ತರುವ ನಿರ್ಧಾರದೊಂದಿಗೆ 1996ನ್ನು ಪ್ರವೇಶಿಸಬೇಕು. ಭರವಸೆ ಮೂರ್ಖರ ಸ್ವತ್ತಲ್ಲ, ಎಷ್ಟೇ ರಕ್ತಪಾತವಾದರೂ ಅದು ಅಳಿದುಹೋಗುವಂಥದ್ದಲ್ಲ. ಹಿಂದಿನ ಎಲ್ಲ ಯುದ್ಧಗಳು ಮತ್ತು ಅಮಾನುಷ ವರ್ತನೆಗಳು ಜನಜೀವನವನ್ನು ನಿರ್ನಾಮ ಮಾಡಲಿಲ್ಲ. ಜನಜೀವನವು ಅನಾಗರಿಕತೆಯ ತಳದಿಂದ ಮತ್ತೆ ಮತ್ತೆ ಪುಟಿದೆದ್ದು ಬರುತ್ತದೆ. ನಮಗೆ ಅದು ತಿಳಿದಿರಬೇಕು, ಅದನ್ನು ನಾವು ಅರ್ಥಮಾಡಿಕೊಂಡು ಆ ದಿಕ್ಕಿನಲ್ಲಿ ಕೆಲಸ ಮಾಡಬೇಕು; ಬೆಳಕಿಗಾಗಿ ಕೆಲಸ ಮಾಡಬೇಕು.

ಎಲ್ಲ ಜ್ಯೋತಿಕಾರ್ಯಕರ್ತರೂ ಒಂದಾಗಿ ಬೆಳಕು ಮತ್ತು ಜೀವನದ ತಳಹದಿಯನ್ನು ಭದ್ರಪಡಿಸುವಂತಾಗಲಿ.

ಮೂಢನಂಬಿಕೆ, ಧರ್ಮ, ಆಚಾರ, ಹುಸಿ ಜ್ಞಾನ ಮತ್ತು ವಿರೂಪಗೊಂಡ ಜ್ಞಾನ, ಬಣ್ಣ ಬಣ್ಣದ ಸಮವಸ್ತ್ರಗಳು ಮತ್ತು ಕೃತ್ರಿಮ ಗೌರವ, ಉಸಿರುಗಟ್ಟಿಸುತ್ತಿರುವ ಇವೆಲ್ಲವುಗಳಿಂದ ದೂರವಾಗುವ ಬಯಕೆ ನನ್ನಲ್ಲಿ ಬಲವಾಗುತ್ತಿದೆ. ಆದರೂ ಎಲ್ಲವನ್ನೂ ಅಲಕ್ಷ್ಯ ಮಾಡದಿರುವಷ್ಟು ಕಲಿತಿದ್ದೇನೆ. ಬಹಳ ಪ್ರೋತ್ಸಾಹಕರ ಸನ್ನಿವೇಶಗಳೂ ಇವೆ. ಆದರೆ ಸ್ವತಂತ್ರವಾಗಿ ಹಾರಾಡಲು ಅಡ್ಡಿಪಡಿಸುವಂತಹ ವೈಯಕ್ತಿಕ ಸಂಬಂಧಗಳು ಮತ್ತು ಇತರ ಅನೇಕ ವಿಷಯಗಳಿಂದ ನಾನು ಮುಕ್ತನಾಗಬೇಕು. ಆ ಸ್ವಾತಂತ್ರ್ಯದಲ್ಲಿಯೇ ನಾನು ವಿಭಿನ್ನ ಮಟ್ಟಗಳಲ್ಲಿ ಕಾರ್ಯವೆಸಗಬಹುದು.

ಅಧ್ಯಾತ್ಮವೆಂದರೆ ಕೇವಲ ಧ್ಯಾನ ಮಾಡುವುದು ಅಥವಾ ಶ್ರದ್ಧಾಭಕ್ತಿಯಿಂದಿರುವುದಲ್ಲ. ಅದಕ್ಕಿಂತ ಹೆಚ್ಚಿನದು ಎಷ್ಟೋ ಇದೆ, ಅದು ನಮಗೆ ಅರ್ಥವಾಗಿಲ್ಲ ಹಾಗೂ ಅದರ ಬಗ್ಗೆ ನಮಗೆ ತಿಳಿಸಿ ಹೇಳಲಾಗಿಲ್ಲ. ಅದೆಂದರೆ ಪರಿಪೂರ್ಣವಾಗಿ ಬದುಕಿ ನಮ್ಮೆಲ್ಲ ಸಕಾರಾತ್ಮಕ ಸಾಮರ್ಥ್ಯಗಳನ್ನು ಹೊರತರುವುದು; ವೈಯಕ್ತಿಕ ಹಾಗೂ ಸಾರ್ವತ್ರಿಕ ಮಟ್ಟದಲ್ಲಿ ಸೃಜನಾತ್ಮಕತೆಯನ್ನು ಅನುಭವಿಸುವುದು; ಅದು ಧರ್ಮಗಳು ತಪ್ಪಾಗಿ ಎತ್ತಿಹಿಡಿದಂತೆ, ಎಂದಿಗೂ ಜೀವನದ ನಿರಾಕರಣೆ ಅಥವಾ ಏಕಾಂಗಿಯಾದ ಉಸಿರುಗಟ್ಟಿಸುವಂತಹ ನಿಷ್ಕ್ರಿಯತೆಯಲ್ಲ. ಮುಂದೆ ಬರುವ ಪ್ರವಾದಿಗಳು ಬಹುಶಃ ಹೊಸ ಶಬ್ದಗಳಲ್ಲಿ ಮತ್ತು ಹೊಸ ಭಾಷೆಗಳಲ್ಲಿ ಇದರ ಬಗ್ಗೆ ಹೆಚ್ಚು ಹೇಳಬಹುದು. ಹೊಸಯುಗವು ಉಲ್ಲಾಸಭರಿತವಾಗಿರುತ್ತದೆ, ಹೆಚ್ಚು ಚೈತನ್ಯದಿಂದ ಕೂಡಿರುತ್ತದೆ. ಬೆಳಕಿನಿಂದ ತುಂಬಿರುತ್ತದೆ.

ನಾನು ಹೆಚ್ಚಿನ ದೈಹಿಕ ಚಟುವಟಿಕೆಗಳಿಂದ ಹಿಂದಕ್ಕೆ ಸರಿದು, ಮೌನ ಮತ್ತು ಬೆಳಕಿನಿಂದ ಕೂಡಿದ ನನ್ನ ಅಂತರಂಗದ ಮಂದಿರದಲ್ಲಿರಲು ನಿರ್ಧರಿಸಿದ್ದೇನೆ. ಆಗ ನಾನು ಹೆಚ್ಚು ಕೆಲಸ ಮಾಡಬಹುದು. ಹೆಚ್ಚು ಅರಿವು ಮೂಡಿಸಬಹುದು. ಹಾಗೂ ನನ್ನ ಜೀವನದ ಉಳಿದ ಕೆಲವೇ ಕ್ಷಣಗಳನ್ನು ಹೆಚ್ಚು ಸಾರ್ಥಕವಾಗಿ ಬಾಳಬಹುದು. ■

ಮಾನಸ ಫೌಂಡೇಶನ್ (ರಿ)
ತಪೋನಗರ, ಚಿಕ್ಕಗುಬ್ಬಿ, (ಹೆಣ್ಣೂರು–ಬಾಗಲೂರು ರೋಡ್) ಬೆಂಗಳೂರು ಅರ್ಬನ್ - 560077. ಭಾರತ.
✆ 99000 75280 (ಬೆಳಗ್ಗೆ 10ರಿಂದ ಸಂಜೆ 5)
ಇ-ಮೇಲ್: info@lightagemasters.com ವೆಬ್‌ಸೈಟ್: www.lightagemasters.com

## ಧ್ಯಾನದ ತರಗತಿಗಳು

### ತಪೋನಗರದಲ್ಲಿ

**ಭಾನುವಾರ** (ಬೆಳಿಗ್ಗೆ 10 ರಿಂದ 11 ಘಂ.)

### ಬೆಂಗಳೂರು ನಗರದಲ್ಲಿ

**ಭಾನುವಾರ** (ಬೆಳಿಗ್ಗೆ 7 ರಿಂದ 8 ಘಂ.)
ಆಂಜನೇಯ ದೇವಸ್ಥಾನ,
ಮಹಾಲಕ್ಷ್ಮೀ ಲೇಔಟ್

**ಸೋಮವಾರ** (ಸಂಜೆ 7 ರಿಂದ 8 ಘಂ.)
ಆಂಜನೇಯ ದೇವಸ್ಥಾನ,
ಮಹಾಲಕ್ಷ್ಮೀ ಲೇಔಟ್

**ಮಂಗಳವಾರ** (ಸಂಜೆ 7 ರಿಂದ 8 ಘಂ.)
ಶ್ರೀ ಅರಬಿಂದೊ ಕಾಂಪ್ಲೆಕ್ಸ್, 1ನೇ ಫೇಸ್,
ಜೆ.ಪಿ. ನಗರ

**ಬುಧವಾರ** (ಸಂಜೆ 7 ರಿಂದ 8 ಘಂ.)
ಆರ್ಯ ಸಮಾಜ, ಸಿ.ಎಂ.ಹೆಚ್. ರೋಡ್,
ಇಂದಿರಾನಗರ
ಹಿಮಾಂಶು, 4ನೆಯ ಮೇನ್, ಮಲ್ಲೇಶ್ವರಂ
ಮಾರುತಿ ಮಂದಿರ, ವಿಜಯನಗರ

**ಗುರುವಾರ** (ಸಂಜೆ 7 ರಿಂದ 8 ಘಂ.)
ದೇವಗಿರಿ ವೆಂಕಟೇಶ್ವರ ದೇವಸ್ಥಾನ
ಬನಶಂಕರಿ 2ನೆಯ ಸ್ಟೇಜ್

**ಶುಕ್ರವಾರ** (ಸಂಜೆ 7 ರಿಂದ 8 ಘಂ.)
ಇಂಡಿಯನ್ ಹೆರಿಟೇಜ್ ಅಕಾಡೆಮಿ
6ನೆಯ ಬ್ಲಾಕ್, ಕೋರಮಂಗಲ

**ಶನಿವಾರ** (ಸಂಜೆ 7 ರಿಂದ 8 ಘಂ.)
ದೇವಗಿರಿ ವೆಂಕಟೇಶ್ವರ ದೇವಸ್ಥಾನ,
ಬನಶಂಕರಿ 2ನೇ ಹಂತ

### ಆನೇಕಲ್‌ನಲ್ಲಿ

**ಸೋಮವಾರ** (ಸಾಯಂಕಾಲ 6 ರಿಂದ 7 ಘಂ.)
**ಮಂಗಳವಾರ** (ಬೆಳಿಗ್ಗೆ 6 ರಿಂದ 7 ಘಂ.)
ಸಪ್ತರ್ಷಿ ಧ್ಯಾನ ಕೇಂದ್ರ, ರಾಜರಾಜೇಶ್ವರಿ ಬಡಾವಣೆ

ಹೊರಗಿನ ಸಾಧಕರಿಗೆ ಅಂಚೆ ಮತ್ತು ಇ-ಮೇಲ್‌ಗಳ ಮೂಲಕ ಧ್ಯಾನದ ತರಗತಿಗಳು ಲಭ್ಯವಿವೆ. ಹೆಚ್ಚು ಮಾಹಿತಿಗಾಗಿ ಆರನೇ ಪುಟದ ಮೊದಲನೇ ಕಾಲಂ ನೋಡಿ.

**ಡೋರ್‌ವೇಸ್ (ಇಂಗ್ಲಿಷ್)/ತಪೋವಾಣಿ (ಕನ್ನಡ) ಪ್ರಕಾಶ್‌ಮಾರ್ಗ್ (ಮರಾಠಿ) ವಾರ್ತಾಪತ್ರದ ವಾರ್ಷಿಕ ಚಂದಾ ರೂ. 300/- ಡಿಡಿಯನ್ನು 'Manasa Light Age Foundation' ಹೆಸರಿನಲ್ಲಿ ಕಳುಹಿಸಬೇಕು. ಮನಿಯಾರ್ಡರ್‌ಗಳನ್ನು ಸ್ವೀಕರಿಸುವುದಿಲ್ಲ.**

### ಮಾಸ ಪತ್ರಿಕೆ

ನಿಮ್ಮ ಸ್ನೇಹಿತರಿಗೆ ತಪೋವಾಣಿಯನ್ನು ಉಡುಗೊರೆಯಾಗಿ ಕೊಡಿ. ವಾರ್ಷಿಕ ಚಂದಾ ದೊಂದಿಗೆ ಅವರ ಹೆಸರು ಮತ್ತು ವಿಳಾಸವನ್ನು ನಮಗೆ ಕಳುಹಿಸಿ.



ತಪೋನಗರ ನಿವಾಸಿಗಳ ಕೂಟದಲ್ಲಿ ಶ್ರೀ ಕೃಷ್ಣ ಜನ್ಮಾಷ್ಟಮಿಯನ್ನು ಆಚರಿಸಲಾಯಿತು

### ಸುದ್ಧಿ-ಸೂಚನೆಗಳು

- ಗುರೂಜಿಯವರ ಮಹಾಸಮಾಧಿ ದಿನವನ್ನು 25-11-2018 ರಂದು ತಪೋನಗರದಲ್ಲಿ ಆಚರಿಸಲಾಗುವುದು. ಇದರಲ್ಲಿ ಭಾಗವಹಿಸಲು, 23-11-2018ರ ಮೊದಲು ಮಾನಸ ಆಫೀಸಿನಲ್ಲಿ ನೊಂದಾಯಿಸಿ.
- ಈ ಕಾರ್ಯಕ್ರಮದಲ್ಲಿ 2019ನೇ ವರ್ಷದ ಮಾನಸ ಕ್ಯಾಲೆಂಡರ್ ಅನ್ನು ಸಹ ಬಿಡುಗಡೆ ಮಾಡಲಾಗುವುದು. ಅದನ್ನು ಕೋರಿದವರಿಗಾಗಿ ಮಾತ್ರ, ಸೀಮಿತ ಪ್ರತಿಗಳನ್ನು ಮುದ್ರಿಸಲಾಗುವುದು. ನಿಮ್ಮ ಪ್ರತಿಯನ್ನು ಕಾದಿರಿಸುವುದಕ್ಕಾಗಿ ದಯವಿಟ್ಟು 11-11-2018ರ ಒಳಗೆ ರಿಜಿಸ್ಟರ್ ಮಾಡಿ.
- 13-01-2019ರಂದು ಹೊಸ ಶಂಬಲ ಗ್ರೂಪ್ ಪ್ರಾರಂಭವಾಗುತ್ತದೆ. ಹೊಸ ಶಂಬಲ ಗ್ರೂಪ್‌ಗೆ ಸೇರಲು ಬಯಸುವ ವಿದ್ಯಾರ್ಥಿಗಳು 31-12-2018 ರೊಳಗೆ ಮಾನಸ ಆಫೀಸಿನಲ್ಲಿ ನೊಂದಾಯಿಸಿಕೊಳ್ಳಬಹುದು. ದೂರಕಲಿಕೆ ವಿದ್ಯಾರ್ಥಿಗಳು ಕೂಡ ಸೇರಬಹುದು. ಶಂಬಲ ಗ್ರೂಪ್‌ನಲ್ಲಿ ಈಗಾಗಲೇ ಸದಸ್ಯರಾಗಿರುವವರು ಕೂಡ 31-12-2018ರ ಒಳಗೆ ತಮ್ಮ ಹೆಸರುಗಳನ್ನು ಮಾನಸ ಆಫೀಸಿನಲ್ಲಿ ನೊಂದಾಯಿಸಿಕೊಳ್ಳುವ ಮೂಲಕ ತಮ್ಮ ಸದಸ್ಯತ್ವವನ್ನು ನವೀಕರಿಸಿ ಕೊಳ್ಳಬೇಕು.

### ಗುರೂಜಿಯವರ ಮಹಾಸಮಾಧಿ ಕಾರ್ಯಕ್ರಮ
### ಭಾನುವಾರ, 25-11-2018

| | |
|---|---|
| ಬೆಳಿಗ್ಗೆ 11 ಕ್ಕೆ | ಸ್ವಾಗತ<br>ಭಾಷಣಗಳು<br>ವಿಶೇಷ ಧ್ಯಾನ |
| ಮಧ್ಯಾಹ್ನ 12.30ಕ್ಕೆ | ಪ್ರಸಾದ |

**ಭಾನುವಾರದ ಉಪನ್ಯಾಸಗಳ ನೇರ ಪ್ರಸಾರವು ವೆಬ್‌ನಲ್ಲಿ ಮೆಂಬರ್‌ಗಳಿಗೆ ಲಭ್ಯವಿದೆ. ಇದರ ಮಾಹಿತಿಗಾಗಿ ಇ-ಮೇಲ್ ಮುಖಾಂತರ ಮಾನಸ ಆಫೀಸ್‌ಅನ್ನು ಸಂಪರ್ಕಿಸಿ.**

### ಧ್ಯಾನಕ್ಕೆ ವಿಶೇಷ ದಿನಗಳು

| | | |
|---|---|---|
| 01 | ಗುರು | ಕೃಷ್ಣ ಅಷ್ಟಮಿ |
| 06 | ಮಂಗಳ | ಮಾಸ ಶಿವರಾತ್ರಿ<br>ನರಕ ಚತುರ್ದಶಿ |
| 07 | ಬುಧ | ಅಮಾವಾಸ್ಯೆ<br>ಮಹಾಲಕ್ಷ್ಮೀ ಪೂಜೆ |
| 08 | ಗುರು | ದೀಪಾವಳಿ<br>ಬಲಿಪಾಡ್ಯಮಿ |
| 15 | ಗುರು | ಶುಕ್ಲ ಅಷ್ಟಮಿ |
| 18 | ಭಾನು | ಶುಕ್ಲ ದಶಮಿ |
| 23 | ಶುಕ್ರ | ಗುರೂಜಿಯವರ ಮಹಾಸಮಾಧಿ ದಿನ<br>ಪೂರ್ಣಿಮಾ<br>ಶಿವದೀಪ |
| 24 | ಶನಿ | ವಿಷ್ಣುದೀಪ |
| 25 | ಭಾನು | ಗುರೂಜಿಯವರ ಮಹಾಸಮಾಧಿ ಕಾರ್ಯಕ್ರಮ |
| 30 | ಶುಕ್ರ | ಕೃಷ್ಣ ಅಷ್ಟಮಿ |

### ಈ ತಿಂಗಳು ತಪೋನಗರದಲ್ಲಿ

| | |
|---|---|
| ಭಾನುವಾರಗಳು: | ಉಪನ್ಯಾಸಗಳು: ಬೆಳಿಗ್ಗೆ 11-12<br>ಲೈಟ್ ಚಾನಲಿಂಗ್:<br>ಮಧ್ಯಾಹ್ನ 12-1 |
| 11-11-2018 | ಮಧ್ಯಾಹ್ನ 2ಕ್ಕೆ ಶಂಬಲ ಗ್ರೂಪ್ ಸಂಧಿಸುತ್ತದೆ |
| 18-11-2018 | ಮಧ್ಯಾಹ್ನ 2ಕ್ಕೆ ರಾ ಗ್ರೂಪ್ ಸಂಧಿಸುತ್ತದೆ |
| 25-11-2018 | ಗುರೂಜಿಯವರ ಮಹಾಸಮಾಧಿ ಕಾರ್ಯಕ್ರಮ |

### ಆನೇಕಲ್‌ನಲ್ಲಿ ಕಾರ್ಯಕ್ರಮ

ಆನೇಕಲ್‌ನಲ್ಲಿರುವ ನಮ್ಮ 'ಸಪ್ತರ್ಷಿ ಧ್ಯಾನ ಕೇಂದ್ರ'ದಲ್ಲಿ ದಿನಾಂಕ 23-11-2018 ರಂದು ಬೆಳಿಗ್ಗೆ 11.30 ಘಂಟೆಗೆ ಗುರೂಜಿಯವರ ಮಹಾಸಮಾಧಿ ಕಾರ್ಯಕ್ರಮವನ್ನು ಆಚರಿಸಲಾಗುತ್ತದೆ.

## ಲೈಟ್ ಚಾನಲಿಂಗ್ ಅನುಭವಗಳು

**ಸಂ: ವೈಶಾಲಿ ಜೋಶಿ; ಅನು: ಪಾಂಡುರಂಗ**

ಕೆಲವು ತಿಂಗಳುಗಳಿಂದ ನಾನು ಸೊಂಟದನೋವಿನಿಂದ ಬಳಲುತ್ತಿದ್ದೆ. ಹತ್ತು ನಿಮಿಷ ನಿಲ್ಲುವುದಕ್ಕೂ ಸಹ ನನಗೆ ಸಾಧ್ಯವಾಗುತ್ತಿರಲಿಲ್ಲ. ಡಾಕ್ಟರ್ ಅವರನ್ನು ಭೇಟಿ ಮಾಡಿದೆ ಮತ್ತು ಸಹಾಯಕ್ಕಾಗಿ ಬೆಳಕನ್ನು ಪ್ರಾರ್ಥಿಸಿದೆ. ನಾಲ್ಕು ಹೆಸರಾಂತ ವೈದ್ಯರುಗಳು ನಡೆಸಿಕೊಡುವ ಉಪನ್ಯಾಸಗಳ ಕಾರ್ಯಕ್ರಮಕ್ಕೆ ಹೋಗಬೇಕೆಂದು ಯೋಜಿಸಿದ್ದೆ. ಅವರಲ್ಲಿ, ಡಾ. ಆಮಾಟೆ ಮತ್ತು ಡಾ. ಭರತ್ ವಾಟ್ವಾನಿಯವರು ಉಪನ್ಯಾಸಕಾರರಾಗಿದ್ದರು. ಸಮಯಕ್ಕೆ ಸರಿಯಾಗಿ ಹೋದೆ, ಆದರೆ ಸಭಾಂಗಣ ಭರ್ತಿಯಾಗಿದ್ದು ಒಂದು ಸೀಟೂ ಖಾಲಿ ಇರಲಿಲ್ಲ. ಹಿಂದುಗಡೆ ನಿಂತುಕೊಳ್ಳಬೇಕಾಯಿತು. ನನಗೆ ಹತ್ತು ನಿಮಿಷಕ್ಕಿಂತ ಹೆಚ್ಚು ಕಾಲ ನಿಲ್ಲಲು ಸಾಧ್ಯವಾಗುವುದಿಲ್ಲವೆಂದು ನನಗೆ ಗೊತ್ತಿತ್ತು. ಸ್ವಲ್ಪ ಸಮಯದ ನಂತರ ಸೊಂಟದ ನೋವು ಪ್ರಾರಂಭವಾಯಿತು. ನನಗೆ ದುಃಖವಾಯಿತು, ಆದರೆ ಕಾರ್ಯಕ್ರಮವನ್ನು ಬಿಟ್ಟು ಹೋಗುವುದಕ್ಕೆ ಮನಸ್ಸಾಗಲಿಲ್ಲ. ಆಗ ನಾನು ಕಣ್ಣುಗಳನ್ನು ಮುಚ್ಚಿಕೊಂಡು, ಬೆಳಕನ್ನು ನನ್ನೊಳಗೆ ಪ್ರವೇಶಿಸುವಂತೆ ಪ್ರಾರ್ಥಿಸಿದೆ. ನನ್ನ ಶರೀರದಲ್ಲಿ ಬೆಳಕನ್ನು ತುಂಬಿಕೊಂಡು, ನನಗೆ ಸಹಾಯ ಮಾಡುವಂತೆ ಬೆಳಕನ್ನು ಕೇಳಿಕೊಂಡೆ. ಆಶ್ಚರ್ಯವೆಂಬಂತೆ ನೋವಿನ ತೀವ್ರತೆ ನಿಧಾನವಾಗಿ ಕಡಿಮೆಯಾಯಿತು ಹಾಗೂ ಮುಂದೆ ನಲವತ್ತು ನಿಮಿಷಗಳವರೆಗೆ ನಿಲ್ಲಲೂ ನನಗೆ ಸಾಧ್ಯವಾಯಿತು. ಕಾರ್ಯಕ್ರಮ ನನಗೆ ಸಂತೋಷ ತಂದಿತು. ನನಗೆ ನಮ್ಮ ಪ್ರೀತಿಯ ಗುರೂಜಿಯವರ ಇರುವಿಕೆಯ ಅನುಭವವಾಯಿತು. ಹಾಗಾಗಿ, ಅದೊಂದು ಅದ್ಭುತವಾದ ಸಂಜೆಯಾಗಿತ್ತು. ಬೆಳಕು ನನಗೆ ಸಹಾಯ ಮಾಡಿದೆ ಎಂದು ತಿಳಿಯಿತು.

– ಸಂತೋಷ್ ಕೋರೆ, ಕಾರ್ಯಕರ್ತ

ಲೈಟ್ ಚಾನಲಿಂಗ್ ಸೆಷನ್ ಬಹಳ ಸಮಾಧಾನಕರವಾಗಿತ್ತು. ನನಗೆ ಸಂತೋಷವಾಯಿತು. ಕೃತಜ್ಞತೆಗಳು.

– ಜಗಜಿತ್ ಸಿಂಗ್ ಬೇಡಿ, ಗುರು ನಾನಕ್ ವಿದ್ಯಾಲಯ ಸೊಸೈಟಿ, ಜಿಟಿಬಿ ನಗರ, ಮುಂಬೈ

ಬೆಳಕು ಬಹಳ ಶಕ್ತಿಯುತವಾಗಿದೆ ಹಾಗೂ ನಮ್ಮ ಜೀವನದಲ್ಲಿ ನಾವು ಹುಡುಕುತ್ತಿರುವ ದಾರಿಗೆ ನಮ್ಮನ್ನು ಕರೆದುಕೊಂಡು ಹೋಗುತ್ತದೆ. ನಮ್ಮ ಭಾವನೆಗಳನ್ನು, ಸಮಸ್ಯೆಗಳನ್ನು, ಆಲೋಚನೆಗಳನ್ನು ಬೆಳಕಿನ ಜೊತೆ ಹಂಚಿಕೊಂಡಾಗ ತಕ್ಷಣ ನಮ್ಮ ಅವಶ್ಯಕತೆಗಳೊಂದಿಗೆ ಜೊತೆಗೂಡುತ್ತೇವೆ ಎನಿಸುತ್ತದೆ. ಬೆಳಕು ಸಂಪೂರ್ಣವಾಗಿ ಸಕಾರಾತ್ಮಕ ಚೈತನ್ಯಗಳಿಂದ ತುಂಬಿದೆ ಹಾಗೂ ಜೀವನದಲ್ಲಿ ಬರುವ ಸಮಸ್ಯೆಗಳಿಗೆ ಪರಿಹಾರಗಳನ್ನು ಪಡೆಯಬಹುದು ಎಂದು ನಾನು ನಂಬಿದ್ದೇನೆ. ನನಗೆ, ನನ್ನ ಸಹೋದ್ಯೋಗಿಗಳಿಗೆ ಮತ್ತು ವಿದ್ಯಾರ್ಥಿಗಳಿಗೆ ಈ ಸಕಾರಾತ್ಮಕ ಚೈತನ್ಯಗಳು ಹರಿಯುತ್ತಿರುವುದರ ಅನುಭವವಾಗಿದೆ. ನಿಯತವಾದ ಲೈಟ್ ಚಾನಲಿಂಗ್ ಅಭ್ಯಾಸವು ಮನಸ್ಸಿಗೆ ಮತ್ತು ಆತ್ಮಕ್ಕೆ ಸಮಾಧಾನ, ಸಂತೋಷ, ಮತ್ತು ಪವಿತ್ರಭಾವನೆಯನ್ನು ತಂದು ಕೊಡುತ್ತದೆ.

– ಮಿಸ್. ಹೇಮಾವತಿ, ಮುಖ್ಯೋಪಾಧ್ಯಾಯರು, ನಳಂದ ಇಂಗ್ಲಿಷ್ ಹೈಸ್ಕೂಲ್, ಕುರುಬರಹಳ್ಳಿ, ಬೆಂಗಳೂರು

## ತಪೋನಗರ ಡೈರಿ

**ಸೀಮಾ ಅಲ್‌ವೇಲ್; ಅನು: ಪಾಂಡುರಂಗ**

ಪ್ರತಿ ವರ್ಷವೂ ತಪೋನಗರ ನಿವಾಸಿಗಳ ಕೂಟದಲ್ಲಿ ಜನ್ಮಾಷ್ಟಮಿ ಹಬ್ಬದ ಪ್ರಯುಕ್ತ ಮಕ್ಕಳು, ಕೃಷ್ಣನ ಕುರಿತಾದ ಒಂದು ಸುಂದರವಾದ ನೃತ್ಯವನ್ನು ಪ್ರದರ್ಶಿಸುತ್ತಾರೆ. ಶ್ರೀಮತಿ ಪ್ರಿಯಾಂಕ ಮಿಶ್ರಾರವರ ನೇತೃತ್ವದಲ್ಲಿ, ಇನ್ನೂ ಅನೇಕ ಮಹಿಳೆಯರು ಸೇರಿ, ಹಾಡಿನ ಆಯ್ಕೆ, ನೃತ್ಯಕ್ಕೆ ಬೇಕಾದ ಉಡುಗೆ ತೊಡುಗೆಗಳು, ವೇದಿಕೆಯ ಅಲಂಕಾರ ಮತ್ತು ಇತರ ಎಲ್ಲಾ ಸಿದ್ಧತೆಗಳನ್ನು ಅಚ್ಚುಕಟ್ಟಾಗಿ ಮಾಡಿದ್ದರು. ಈ ವರ್ಷ, ಕುಮಾರಿ ಇಶಿತ ಚಲಪತಿ, ಕುಮಾರಿ ಶ್ರುತಿ ಮಿಶ್ರಾ ಮತ್ತು ಇತರೆ ಕೆಲವು ಮಕ್ಕಳು ಸೇರಿ ಭರತನಾಟ್ಯವನ್ನು ಪ್ರದರ್ಶಿಸಿದರು. ನಂತರ ಚಿಣ್ಣರ ತಂಡವೊಂದು ಶ್ರೀಕೃಷ್ಣನ ಲೀಲೆಯನ್ನು ಒಂದು ಸಂಗೀತ ರೂಪಕದ ಮೂಲಕ ಪ್ರದರ್ಶಿಸಿತು.

ಇಡೀ ಕಾರ್ಯಕ್ರಮದ ನಿರೂಪಣೆಯನ್ನು ಸಾತ್ವಿಕ್ ಮತ್ತು ಸ್ವಸ್ತಿಕ ಕಾನಡೆ ಅವರು ಅತ್ಯಂತ ಸಮರ್ಥವಾಗಿ ನಡೆಸಿಕೊಟ್ಟರು. ಹಬ್ಬದ ಉಡುಗೆ ತೊಡುಗೆಗಳನ್ನು ಧರಿಸಿದ್ದ ಇವರಿಬ್ಬರೂ ಉದಯೋನ್ಮುಖ ತಾರೆಗಳಂತೆ ಮಾತನಾಡಿದರು. ಬಾಲಕ ವಿಧಾತ ಕಾರಂತ ಕನ್ನಡದಲ್ಲಿ ಒಂದು ಸುಂದರವಾದ ಭಕ್ತಿ ಗೀತೆಯನ್ನು ಸುಶ್ರಾವ್ಯವಾಗಿ ಹಾಡಿದರೆ, ಅವನ ಸಹೋದರಿ ವಿಶ್ರುತಿ ಕಾರಂತ ಭರತನಾಟ್ಯದ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದಲ್ಲದೇ, ಒಂದು ಹಿಂದಿ ಭಕ್ತಿ ಗೀತೆಯನ್ನೂ ಹಾಡಿದಳು. ಪುಟ್ಟ ಪುಟ್ಟ ಮಕ್ಕಳು ಕೃಷ್ಣ, ರಾಧೆಯರ ವೇಷ ಧರಿಸಿ ವೇದಿಕೆಯ ಮೇಲೆ ಬಂದಾಗ ಕಾರ್ಯಕ್ರಮಕ್ಕೆ ಮತ್ತಷ್ಟು ರಂಗೇರಿತು. ಕಾರ್ಯಕ್ರಮಕ್ಕೆ ಬಂದಿದ್ದ ಪ್ರತಿ ಕುಟುಂಬಕ್ಕೂ ಅಲಂಕೃತವಾದ ಕೊಳಲುಗಳನ್ನು ನೆನಪಿನ ಕಾಣಿಕೆಯಾಗಿ ಕೊಡಲಾಯಿತು. ಕೆಲವು ತಪೋನಗರ ನಿವಾಸಿಗಳು ಹಬ್ಬದ ಉಡುಗೆ ತೊಡುಗೆಗಳನ್ನು ತೊಟ್ಟು ಕಾರ್ಯಕ್ರಮಕ್ಕೆ ಹೆಚ್ಚಿನ ಮೆರುಗನ್ನು ತಂದರು. ಎಂದಿನಂತೆ ಶ್ರೀ ಗುರುರಾಜ್ ಕಾನಡೆ ಅವರು ದೃಶ್ಯ ಮತ್ತು ಧ್ವನಿ ಸಂಯೋಜನೆಗಳ ಜವಾಬ್ದಾರಿಯನ್ನು ಯಶಸ್ವಿಯಾಗಿ ನಿರ್ವಹಿಸಿ ಕಾರ್ಯಕ್ರಮಕ್ಕೆ ಬೆಂಬಲವಾಗಿದ್ದರು.

ನಮ್ಮ ಗುರೂಜಿಯವರ 6ನೇ ವರ್ಷದ ಮಹಾಸಮಾಧಿ ಕಾರ್ಯಕ್ರಮವನ್ನು ನವೆಂಬರ್ ತಿಂಗಳಿನಲ್ಲಿ ಆಚರಿಸಲಾಗುವುದು. ಇದು ನಮ್ಮ ಆಧ್ಯಾತ್ಮಿಕ ಪಯಣದ ಏಳು ಬೀಳುಗಳನ್ನು ಅವಲೋಕನ ಮಾಡಿಕೊಳ್ಳುವ ಸಮಯ. ಮತ್ತೊಂದು ಹೊಸ ವರ್ಷವನ್ನು ಸ್ವಾಗತಿಸುವ ಮೊದಲು, ಈ ವರ್ಷದ ಪ್ರಾರಂಭದಲ್ಲಿ ನಾವು ಮಾಡಿದ್ದ ಸಂಕಲ್ಪಗಳನ್ನು ತಾಳೆ ನೋಡಲು ಕೇವಲ ಒಂದು ತಿಂಗಳ ಕಾಲಾವಕಾಶ ಮಾತ್ರ ನಮಗಿದೆ. ■

## ಲೈಟ್ ಚಾನಲ್ಸ್

**ವಿಶ್ವ ಸಂಚಲನ**

ಇದೊಂದು ಆತ್ಮಪ್ರಜ್ಞೆಯಲ್ಲಿ ನಡೆಯುವ ಸಂಚಲನ. ಈ ಪ್ರಪಂಚವನ್ನು ಬೆಳಕು, ಶಾಂತಿ ತುಂಬಿರುವ ಒಂದು ಸುಂದರ ಪ್ರದೇಶವನ್ನಾಗಿ ಮಾಡುವ ಸಂಚಲನ. ಇಲ್ಲಿ ಭಾಷಣಗಳು, ಬಾವುಟಗಳಿಲ್ಲ. ಇಲ್ಲಿ ಬೆಳಕನ್ನು ಮೇಲಿನಿಂದ ತಂದು ಸುತ್ತಲೂ ಹರಡಿದರೆ ಅಷ್ಟೇ ಸಾಕು. ಉಳಿದ ಎಲ್ಲ ಕೆಲಸವನ್ನೂ ಬೆಳಕೇ ಮಾಡುತ್ತದೆ.

ನಾವು ಬೆಳಕನ್ನು ತಂದು ಹರಡಿದಾಗ, ಅದು ಬೇರೆಯವರ ಹೃದಯಗಳು ಮನೆಗಳನ್ನು ತುಂಬಿ, ಅವರ ಭಾವನೆ–ವಿಚಾರಗಳಲ್ಲಿರುವ ಕತ್ತಲನ್ನು ಬೆಳಕನ್ನಾಗಿ ಪರಿವರ್ತಿಸುತ್ತದೆ. ಆಗ ವ್ಯಕ್ತಿಗಳಲ್ಲಿ ಪರಿವರ್ತನೆ ಯುಂಟಾಗುತ್ತದೆ. ವ್ಯಕ್ತಿಗಳಿಂದ ಪ್ರಪಂಚ ಪರಿವರ್ತಿತವಾಗುತ್ತದೆ. ಪ್ರಪಂಚದಲ್ಲಿ ಬೆಳಕು ತುಂಬುತ್ತದೆ.

ಈ ಬೆಳಕು ಸಾಧಾರಣ ಬೆಳಕಲ್ಲ. ಯಾವ ಬೆಳಕಿನಿಂದ ಇಡೀ ಸೃಷ್ಟಿ ಬಂದಿದೆಯೋ ಆ ಮೂಲ ಬೆಳಕು. ಈ ಬೆಳಕಿನಲ್ಲಿ ಎಲ್ಲಾ ಇದೆ – ಶಕ್ತಿ, ವಿವೇಕ ಮತ್ತು ಭವಿಷ್ಯ. ಈ ಬೆಳಕು ಕಾಣುವುದಿಲ್ಲ. ಆದರೆ ಎಲ್ಲಾ ಕಡೆ ಇದೆ.

**ನಾವು ಪ್ರತಿದಿನ ಏಳುವಾಗ ಮತ್ತು ಮಲಗುವಾಗ 7 ನಿಮಿಷಗಳ ಕಾಲ ಈ ಬೆಳಕನ್ನು ತಂದು ಹರಡೋಣ. ಹರಡಿ ಪ್ರಪಂಚದಲ್ಲಿ ಪರಿವರ್ತನೆಯನ್ನು ತರೋಣ.**

ಈ ಸಂಚಲನವನ್ನು 18–5–2008 ರಂದು, ಗುರೂಜಿ ಕೃಷ್ಣಾನಂದರ ಮೂಲಕ, ಸಪ್ತಋಷಿಗಳು ಪ್ರಾರಂಭಿಸಿದರು.

ಈ ಸಂದೇಶವನ್ನು ಬೇರೆಯವರಿಗೆ ಹರಡಿ. ಈ ಸಂಚಲನವನ್ನು ಬೆಳೆಸಿ. ನಮ್ಮ ವೆಬ್‌ಸೈಟ್ www.lightchannels.com ಗೆ ಬನ್ನಿ.

## ಶಂಬಲದ ತತ್ವಗಳು

**ಶಂಬಲದ ಈ ಏಳು ತತ್ವಗಳನ್ನು ಪುರಾತನ ಋಷಿಗಳು ಕೊಟ್ಟಿದ್ದಾರೆ. ಇವುಗಳನ್ನು ಜೀವನದಲ್ಲಿ ಅಳವಡಿಸಿಕೊಂಡು ಶಂಬಲದಲ್ಲಿ ವಾಸಿಸುತ್ತಿರುವ ಜನ ಶಾಂತಿ–ಪೂರ್ಣತೆಗಳಿಂದ, ವೃದ್ಧಾಪ್ಯ ಬಾರದೆ ಯಾವಾಗಲೂ ಯೌವ್ವನದಲ್ಲಿಯೇ, ಬದುಕಿದ್ದಾರೆ.**

1. ನಮ್ಮೊಳಗಿರುವ ಬೆಳಕನ್ನು ಅನುಭವಿಸಿ, ಹೊರಗೆ ತಂದು ಹರಡುವುದು.
2. ಪ್ರೀತಿಯನ್ನು ಅನುಭವಿಸಿ ಸುತ್ತಲೂ ಹರಡುವುದು.
3. ಎಲ್ಲರಲ್ಲಿಯೂ ಮತ್ತು ಎಲ್ಲದರಲ್ಲಿಯೂ ಇರುವ ಚೈತನ್ಯವನ್ನು ಅನುಭವಿಸುವುದು.
4. ದಿನ ನಿತ್ಯದ ಚಟುವಟಿಕೆಗಳನ್ನು ಮೊದಲು ಮನಸ್ಸಿನಲ್ಲಿ ನೆನೆದು, ಅನಂತರ ಪಿಸುಮಾತಿನಲ್ಲಿ ಹೇಳಿ ಅನಂತರ ಕಾರ್ಯಗತ ಮಾಡುವುದು.
5. ಯಾವುದೇ ಗುರಿಯನ್ನು ಸಾಧಿಸುವ ಮೊದಲು, ಅದರ ಬಗ್ಗೆ ಹೆಚ್ಚು ಮಾತನಾಡದೆ ಗುಟ್ಟಾಗಿಡುವುದು.
6. ಧ್ಯಾನದಿಂದ ದೇಹ, ಮನಸ್ಸು ಮತ್ತು ಬುದ್ಧಿಗಳ ಶಕ್ತಿಗಳನ್ನು ಒಟ್ಟುಮಾಡಿ ಅರಿಷಡ್ವರ್ಗವನ್ನು ಗೆಲ್ಲುವುದು.
7. ನಮಗೆ ಬೇಕಾದ ಲೌಕಿಕ ಅಗತ್ಯಗಳ ಬಗ್ಗೆ ನಾವೇ ನಮ್ಮ ತೃಪ್ತಿಯ ರೇಖೆಗಳನ್ನು ಹಾಕಿಕೊಂಡು, ಆಧ್ಯಾತ್ಮಿಕ ಸಾಧನೆಯ ಬಗ್ಗೆ ಗಮನಕೊಡುವುದು.

## ಗುರೂಜಿಯವರ ನುಡಿಗಳು

ಸಂ: ಶೋಭಾ ಕೆ. ರಾವ್; ಅನು: ಸುಧಾಕರ್

ಅಕ್ಟೋಬರ್ 2005 (ಮುಂದುವರಿದ ಭಾಗ)

ನಾನು ಸಂಪರ್ಕದ ಬಗ್ಗೆ ಯೋಚಿಸುತ್ತಿದ್ದೆ. ನಾವು ಋಷಿಗಳಿಂದ ಅಥವ ಬೇರೊಬ್ಬ ವ್ಯಕ್ತಿಯಿಂದ ಜ್ಞಾನ ಅಥವ ಒಂದು ಸಂದೇಶವನ್ನು ಪಡೆದು ನಂತರ ಅದನ್ನು ಬೇರೆಯವರಿಗೆ ತಿಳಿಸುತ್ತೇವೆ. ಈ ಪ್ರಕ್ರಿಯೆಯನ್ನು ನೀವು ಅರ್ಥಮಾಡಿಕೊಳ್ಳಬೇಕೆಂದು ನಾನು ಬಯಸುತ್ತೇನೆ, ಇದು ಬಹಳ ಸರಳ. ಈ ಪ್ರಕ್ರಿಯೆಯ ಬಗ್ಗೆ ಚಿಂತನೆ ಮಾಡೋಣ. ಜ್ಞಾನವನ್ನು ಪಡೆದು ಅದನ್ನು ಹಸ್ತಾಂತರಿಸುವುದರಲ್ಲಿ ಮೂರು ಹಂತಗಳಿವೆ; ಮೊದಲನೆಯದು ಅದನ್ನು ಪಡೆಯುವುದು, ಎರಡನೆಯದು ಅದನ್ನು ಅರ್ಥಮಾಡಿಕೊಳ್ಳುವುದು ಮತ್ತು ನಂತರದ ಹಂತ ಅದನ್ನು ಹಸ್ತಾಂತರಿಸುವುದು. ಪಡೆದುಕೊಳ್ಳುವಾಗ, ಮಾಹಿತಿ, ಜ್ಞಾನ ಅಥವ ಸಂದೇಶವನ್ನು ಪೂರ್ಣವಾಗಿ ಅಥವ ಭಾಗಶಃ ಪಡೆಯಬಹುದು. ಅದು ನಮ್ಮನ್ನವಲಂಬಿಸಿದೆ. ಅರ್ಥಮಾಡಿಕೊಳ್ಳುವಾಗ, ಅದನ್ನು ಸರಿಯಾಗಿ ಅರ್ಥಮಾಡಿಕೊಳ್ಳಬಹುದು ಅಥವ, ಭಾಗಶಃ ಅಥವ ಬೇರೆಯಾಗಿಯೇ ಅರ್ಥಮಾಡಿಕೊಳ್ಳಬಹುದು. ಭಾಗಶಃ ಪಡೆದುಕೊಂಡಾಗ, ನಾವು ನಮ್ಮದೇ ರೀತಿಯಲ್ಲಿ ಅರ್ಥಮಾಡಿಕೊಳ್ಳುತ್ತೇವೆ ಅಂದರೆ ಅದನ್ನು ಬೇರೆ ರೀತಿಯಲ್ಲಿ ಅರ್ಥ ಮಾಡಿಕೊಳ್ಳುತ್ತೇವೆ ಮತ್ತು ಆಗ ಅದು ವಿರೂಪಗೊಳ್ಳುತ್ತದೆ. ಆ ಸಾಧ್ಯತೆಗಳಿವೆ; ಪ್ರತಿ ಬಾರಿಯೂ ನಾವು ಹಾಗೆ ಮಾಡುತ್ತೇವೆಂದು ನಾನು ಹೇಳುತ್ತಿಲ್ಲ. ನಾವು ಸರಿಯಾಗಿ ಅರ್ಥಮಾಡಿಕೊಂಡು ಹೇಗಿದೆಯೋ ಹಾಗೆಯೇ ಅದನ್ನು ಹಸ್ತಾಂತರಿಸಲೂ ಬಹುದು. ಆದರೆ ಕೆಲವೊಮ್ಮೆ ನಾವು ಬೇರೆ ರೀತಿಯಲ್ಲಿ ಅರ್ಥಮಾಡಿಕೊಳ್ಳುವುದರಿಂದ ಅದು ವಿರೂಪಗೊಳ್ಳುತ್ತದೆ. ಆದ್ದರಿಂದ ನಾವು ಸಂಪರ್ಕ ಪಡೆದು ಹಸ್ತಾಂತರಿಸುವಾಗ, ಏನನ್ನು ಹಸ್ತಾಂತರಿಸುತ್ತಿರುತ್ತೇವೆ? ಮೊದಲ ಸಾಧ್ಯತೆಯೆಂದರೆ ನಾವು ಸರಿಯಾದುದನ್ನೇ ಹಸ್ತಾಂತರಿಸುತ್ತಿರಬಹುದು. ಮತ್ತೊಂದು ಸಾಧ್ಯತೆಯೆಂದರೆ, ನಾವು ತಪ್ಪಾಗಿ ಅರ್ಥಮಾಡಿಕೊಂಡು ವಿರೂಪಗೊಂಡಿರುವುದನ್ನೇ ಹಸ್ತಾಂತರಿಸುತ್ತಿರಬಹುದು. ಮತ್ತೊಂದು ವಿಷಯವಿದೆ, ನಮಗೆ ಭಾಷೆ ಸರಿಯಾಗಿ ಗೊತ್ತಿಲ್ಲದಿದ್ದರೆ ಸಂದೇಶವನ್ನು ಅಥವ ಮಾಹಿತಿಯನ್ನು ಸರಿಯಾಗಿ ತಿಳಿಸಲಾಗುವುದಿಲ್ಲ. ಆಗ ಇಡೀ ಪ್ರಕ್ರಿಯೆಯೇ ಸೋಲುತ್ತದೆ. ಆದ್ದರಿಂದ ನಾವು ಎಚ್ಚರಿಕೆಯಿಂದಿರಬೇಕು. ನನ್ನ ಗುರುವಿನ ಕಾಲದಿಂದಲೂ ನಾನಿದನ್ನು ನೋಡಿದ್ದೇನೆ. ಅವರು ಬಹಳ ಸರಳವಾಗಿ ವಿಷಯಗಳನ್ನು ತಿಳಿಸುತ್ತಿದ್ದರು, ಆದರೆ ಜನರು ಇತರರಿಗೆ, ಸಂಪೂರ್ಣವಾಗಿ ಬೇರೆ ರೀತಿಯಲ್ಲಿಯೇ ತಿಳಿಸುತ್ತಿದ್ದುದನ್ನು ನಾನು ಕೇಳಿಸಿಕೊಂಡಿದ್ದೇನೆ. ಇಲ್ಲಿ ಕೂಡ ಕೆಲವೊಮ್ಮೆ ಬಹಳ ಸರಳವಾದ ವಿಷಯಗಳನ್ನು, ಉದಾಹರಣೆಗೆ, ಒಂದು ತಂತ್ರವನ್ನು ಕಲಿಸುತ್ತೇವೆ. ಅದನ್ನು ಬೇರೆಯವರಿಗೆ ವಿವರಿಸುವಾಗ ಅದಕ್ಕೆ, ಬಹುಶಃ ಸ್ವಲ್ಪ ಸೇರಿಸಬಹುದು ಅಥವ ಬಿಡಬಹುದು, ಅಥವ ಮಾರ್ಪಡಿಸಬಹುದು ಮತ್ತು ಕೆಲವೊಮ್ಮೆ ಅದನ್ನು ಉತ್ತಮಗೊಳಿಸಲೂ ಪ್ರಯತ್ನಿಸಬಹುದು! ನಾವು ಬುದ್ಧಿವಂತರು, ಅದನ್ನು ಉತ್ತಮಗೊಳಿಸಿ ಹಸ್ತಾಂತರಿಸೋಣ ಎಂದೂ ನಾವು ಯೋಚಿಸಬಹುದು! ಆದ್ದರಿಂದ ಹೇಗೆ ಇದೆಯೋ ಹಾಗೇ ಮತ್ತೊಬ್ಬರಿಗೆ ತಲುಪಿಸುವುದು ಬಹಳ ಕಷ್ಟ. ನಮ್ಮಲ್ಲಿ ಅಹಂ ಇಲ್ಲದಿದ್ದರೆ, ಅಥವ ನನ್ನ ಗುರು ಒತ್ತಿ ಹೇಳುತ್ತಿದ್ದಂತೆ ನಾವು ಒಂದು ಸಾಧನ(Tool)ವಾದರೆ, ನಾವೇ ಅತ್ಯಂತ ಸಮರ್ಥ ವ್ಯಕ್ತಿಗಳು. ವ್ಯಕ್ತಿಯೊಬ್ಬರು ಜಾಣರಾಗಿರಬೇಕಾಗಿಲ್ಲ, ಒಂದು ಸಾಧನವಾದರೆ ಸಾಕು. ಆದರೆ ಸಾಧನವಾಗಿಯೇ ಉಳಿಯುವುದು ಎಷ್ಟೊಂದು ಕಷ್ಟ. ಏಕೆಂದರೆ ಉತ್ತಮಗೊಳಿಸುವ ಪ್ರಲೋಭನೆ ಯಾವಾಗಲೂ ಇರುತ್ತದೆ. ವಿಶೇಷವಾಗಿ, ಎತ್ತಿಹೇಳಲು ಮತ್ತು ಉತ್ಪ್ರೇಕ್ಷಿಸಿ ಹೇಳಲು ಪ್ರಯತ್ನಿಸಿದಾಗ, ನಾವು ಸರಿಯಾದುದನ್ನೇ ಮಾಡುತ್ತಿದ್ದೇವೆಂದು ಯೋಚಿಸುತ್ತೇವೆ. ನಾವು ಸರಿಯಾದುದನ್ನು ಮಾಡುತ್ತಿಲ್ಲದಿರಬಹುದೆಂದು ನಮಗೆ ತಿಳಿದಿರುವುದಿಲ್ಲ. ಇದರ ಬಗ್ಗೆ ಇಲ್ಲಿನ ಶಿಕ್ಷಕರು ಎಚ್ಚರದಿಂದಿರಬೇಕು. ಯಾವುದಾದರೂ ಮಾಹಿತಿಯನ್ನು ನಾನು ಪಡೆದಾಗ, ಒಂದೆರಡು ಬಾರಿ ಅಥವ ಕೆಲವೊಮ್ಮೆ ಹತ್ತಾರು ಬಾರಿ ಪರಿಶೀಲಿಸುತ್ತೇನೆ. ನನಗೆ ಖಚಿತವಾದಾಗ ಮಾತ್ರವೇ ಅದನ್ನು ಇತರರಿಗೆ ತಲುಪಿಸುತ್ತೇನೆ. ನೀವು ಮತ್ತೊಬ್ಬರಿಗೆ ಹೇಳದಿದ್ದರೂ ಪರವಾಗಿಲ್ಲ, ಆದರೆ ತಪ್ಪಾಗಿ ತಿಳಿಸುವುದು ಒಳ್ಳೆಯದಲ್ಲ ಮತ್ತು ಸರಿಯಲ್ಲ.

ನವೆಂಬರ್ 2005

ವೈಯಕ್ತಿಕ ಮಟ್ಟದಲ್ಲಿ ಪ್ರತಿಕ್ರಿಯಿಸುವಾಗ, ವ್ಯಕ್ತಿಯೊಬ್ಬನ ಪ್ರಯತ್ನಗಳಿಗೆ ಸಹಾಯ ಅಥವ ಬೆಂಬಲ ನೀಡಲು ಪ್ರಯತ್ನಿಸಿದಾಗಲೆಲ್ಲಾ, ನಾನು ಭೌತಿಕ ಮಟ್ಟದಲ್ಲಿ ಮಾಡುತ್ತಿರುವುದು ಕೇವಲ 10% ಎಂದು ನನಗೆ ಅರಿವಾಗಿದೆ. ನನಗೂ ನನ್ನದೇ ಆದ ಪದಗಳ ಮತ್ತು ಭಾಷೆಯ ಮಿತಿಗಳಿವೆ. ಎಲ್ಲವನ್ನೂ ನಾನು ಅರ್ಥಮಾಡಿಕೊಳ್ಳಲಾರೆ. ನಿಮಗೆ ಏನನ್ನಾದರೂ ತಿಳಿಸಲು ಅಥವ ಸಲಹೆ ನೀಡಲು ಪ್ರಯತ್ನಿಸಿದಾಗ ಅದು ನನ್ನ 10% ಕೆಲಸ ಮಾತ್ರ. 90% ಕೆಲಸವು ಸೂಕ್ಷ್ಮ ಮಟ್ಟದಲ್ಲಿ ನಡೆಯುತ್ತದೆ. ಇದನ್ನು ಯಾರು ಬೇಕಾದರೂ ಮಾಡಬಹುದು. ನಾನು ಕೆಲವೊಮ್ಮೆ ಅದನ್ನು ಪ್ರಜ್ಞಾಪೂರ್ವಕವಾಗಿ ಮಾಡುತ್ತೇನೆ ಮತ್ತು ಬೇರೆ ಸಮಯಗಳಲ್ಲಿ ಅದನ್ನು ಋಷಿಗಳು ಮಾಡುತ್ತಾರೆ. ಅವರು ವ್ಯಕ್ತಿಗಳೊಂದಿಗೆ ಮಾತನಾಡುತ್ತಾರೆ, ಸಹಾಯ ಮಾಡುತ್ತಾರೆ ಮತ್ತು ಚೈತನ್ಯಗಳನ್ನು ಕೊಡುತ್ತಾರೆ; ಹಿಂದಿನ ಜನ್ಮದ ವಿಷಯಗಳನ್ನು ಸೂಕ್ಷ್ಮಮಟ್ಟದಲ್ಲಿ ಒಬ್ಬ ವ್ಯಕ್ತಿಯ ಎದುರಿನಲ್ಲಿರಿಸುವುದು ಸುಲಭ. ಹಾಗೂ ಹಿಂದಿನ ಜನ್ಮಗಳ ಸಂಗತಿಗಳನ್ನು ನೋಡಿದಾಗ, ನಾವು ಎಲ್ಲಿ ತಪ್ಪಿದ್ದೆವು ಮತ್ತು ಎಲ್ಲಿ ಜಯಶಾಲಿಗಳಾಗಿದ್ದೆವು ಎನ್ನುವುದು ತಿಳಿಯುತ್ತದೆ. ನಾವು ಯಾವಾಗಲೂ ತಪ್ಪುಗಳನ್ನೇ ಮಾಡಿದ್ದೇವೆಂದು ಎಂದಿಗೂ ತಿಳಿಯುವುದು ಬೇಡ; ನಾವು ಕೆಲವು ಒಳ್ಳೆಯದನ್ನೂ ಮಾಡಿರಬಹುದು. ಯಾವುದರಿಂದ ದೂರವಿರಬೇಕು, ಯಾವುದನ್ನು ಆಯ್ಕೆ ಮಾಡಿಕೊಳ್ಳಬೇಕೆನ್ನುವುದು ನಮಗೆ ತಿಳಿಯುತ್ತದೆ. ಕೆಲವೊಮ್ಮೆ ಋಷಿಗಳು ನಮಗೆ ಭವಿಷ್ಯದ್ದನ್ನೂ ತೋರಿಸುತ್ತಾರೆ. ಇವು ಸೂಕ್ಷ್ಮ ಮಟ್ಟದಲ್ಲಿ ಸಾಧ್ಯ. ಕೆಲವೊಮ್ಮೆ ಜನರಿಗೆ ಇದರ ನೆನಪು ಭೌತಿಕ ಮಟ್ಟದಲ್ಲೂ ಇರುತ್ತದೆ. ಅವರು, ನಾನು ಕನಸೊಂದನ್ನು ಕಂಡೆ ಎಂದು ಹೇಳುತ್ತಾರೆ. ಆದರೆ, ಜನರಿಗೆ ಇದರ ಅರಿವು ಅನೇಕ ಸಮಯಗಳಲ್ಲಿ ಇರುವುದಿಲ್ಲ ಹಾಗೂ ಅದು ಮುಖ್ಯವೇನಲ್ಲ. ಸೂಕ್ಷ್ಮ ಮಟ್ಟದಲ್ಲಿ ಏನು ನಡೆಯುತ್ತಿದೆಯೋ ಅದನ್ನು ಭೌತಿಕ ಮಟ್ಟದಲ್ಲಿ ನಾವು ತಿಳಿಯಬೇಕಾಗಿಲ್ಲ. ಕೆಲವು ವಿಷಯಗಳನ್ನು ನಾವು ಈ ಮಟ್ಟದಲ್ಲಿ ತಿಳಿಯುವ ಅವಶ್ಯಕತೆಯಿದ್ದರೆ, ಅದು ಭೌತಿಕ ಮಟ್ಟಕ್ಕೆ ಬಂದು, ಅದನ್ನು ನಾವು ಭೌತಿಕ ಮಟ್ಟದಲ್ಲಿ ಅರಿತುಕೊಳ್ಳುವುದನ್ನು ಋಷಿಗಳು ಖಾತರಿಪಡಿಸುತ್ತಾರೆ. ಆದ್ದರಿಂದ ನಮ್ಮ ಕಲಿಯುವಿಕೆಯ ಬಹುತೇಕ ಭಾಗ ಸೂಕ್ಷ್ಮ ಮಟ್ಟದಲ್ಲಿ ನಡೆಯುತ್ತದೆ. ಆದ್ದರಿಂದಲೇ ಸೂಕ್ಷ್ಮ ಪ್ರಪಂಚ ಅಷ್ಟೊಂದು ಮುಖ್ಯ. ಮೊದಲಿಗೆ ಘಟನೆಯೊಂದು ಸೂಕ್ಷ್ಮ ಮಟ್ಟದಲ್ಲಿ ನಡೆಯುತ್ತದೆ, ನಂತರ ಅದು ಭೌತಿಕ ಮಟ್ಟದಲ್ಲಿ ನಡೆಯುತ್ತದೆ ಅಥವ ಪ್ರಕಟಗೊಳ್ಳುತ್ತದೆ. ನಾವು 72 ಗಂಟೆಗಳ ಮುಂಚೆ ಇದೇ ರೀತಿ ಸೂಕ್ಷ್ಮ ಮಟ್ಟದಲ್ಲಿ ಭೇಟಿಯಾಗಿದ್ದೆವು ಮತ್ತು ಅದೇ ಈಗ ಭೌತಿಕ ಮಟ್ಟದಲ್ಲಿ ಜರುಗುತ್ತಿದೆ. ಈ 72 ಗಂಟೆಗಳ ಅಂತರದಲ್ಲಿ ಏನಾದರೂ ಬದಲಾವಣೆಗಳು ಆಗಬಹುದಾ, ನಾವು ಏನಾದರೂ ಬದಲಾವಣೆ ತರಬಹುದಾ? ಹೌದು, ಇದನ್ನು ಬದಲಾಯಿಸಬಹುದು ಎನ್ನುವುದೇ ಸ್ವಾರಸ್ಯಕರ ವಿಷಯ. ಯಾವುದೇ ಸಮಯದಲ್ಲೂ ಭವಿಷ್ಯವನ್ನು ಬದಲಾಯಿಸಬಹುದು. ಸರಳ ಉದಾಹರಣೆಯೆಂದರೆ ಅಪಘಾತವನ್ನು ತಪ್ಪಿಸುವುದು. 72 ಗಂಟೆಗಳ ಹಿಂದೆ, ಸೂಕ್ಷ್ಮ ಮಟ್ಟದಲ್ಲಿ ಅಪಘಾತವೊಂದು ಜರುಗಿರುತ್ತದೆ. ನನಗೆ ಅದರ ಅರಿವಿದ್ದರೆ, ಭೌತಿಕ ಮಟ್ಟದ ಪ್ರಯತ್ನದ ಮೂಲಕ ಮಾತ್ರವಲ್ಲದೇ ಆಧ್ಯಾತ್ಮಿಕ ಪ್ರಯತ್ನದ ಮೂಲಕವೂ ನಾನು ಅದನ್ನು ಬದಲಾಯಿಸಬಹುದು. ಆದ್ದರಿಂದ ಸೂಕ್ಷ್ಮ ಜಗತ್ತಿನ ಬಗ್ಗೆ ಹೆಚ್ಚು ತಿಳಿಯುವುದು ಅತಿ ಮುಖ್ಯ, ಆಗ 72 ಗಂಟೆಗಳ ನಂತರದ ಇಂದಿನ ದಿನವನ್ನು ಉತ್ತಮವಾಗಿ ಬದುಕಬಹುದು. ನಾವು ಇನ್ನೂ ಅರ್ಥಮಾಡಿಕೊಳ್ಳಬೇಕಾಗಿರುವ ವಿಷಯಗಳು ಬಹಳ ಇವೆ. ನಾವು ಈ ಪ್ರಪಂಚಗಳಿಗೆ ತೆರೆದುಕೊಳ್ಳುವ ಸಮಯ ಬಂದಿದೆ. ■

# ಶ್ರೀ ಜಯಂತ್ ದೇಶ್‌ಪಾಂಡೆಯವರ ಭಾಷಣದ ಆಯ್ದ ಭಾಗಗಳು

ಸಂ: ಶೋಭಾ ಕೆ. ರಾವ್; ಅನು: ಸುಧಾಕರ್

09-09-2018

ನಾನು ಕೆಲವರೊಂದಿಗೆ ಮಾತನಾಡುತ್ತಿದ್ದೆ, ಆಗ ಒಂದು ಸಂದರ್ಭದಲ್ಲಿ ಈ ಪ್ರಶ್ನೆ ಬಂತು, "ಒಬ್ಬ ವ್ಯಕ್ತಿ ಬಹಳಷ್ಟು ಧ್ಯಾನ ಮಾಡುತ್ತಾನೆ, ವರ್ಷಾನುಗಟ್ಟಲೆ ಧ್ಯಾನ ಮಾಡಿರಬಹುದು, ಹಾಗಿದ್ದರೂ ಅವನು ಬದಲಾಗಿಲ್ಲ. ಇದು ಹೇಗೆ ಸಾಧ್ಯ?" ಈ ಪ್ರಶ್ನೆಗೆ ನಮ್ಮೆಲ್ಲರಿಗೂ ಉತ್ತರ ತಿಳಿದಿದೆ. ನಮ್ಮಲ್ಲಿ ಬದಲಾವಣೆಗೆ ನಾವು ಅವಕಾಶ ಮಾಡಿಕೊಡುವುದಿಲ್ಲ. ಬದಲಾವಣೆಗೆ ಧ್ಯಾನ ಸಹಾಯ ಮಾಡುತ್ತದೆ, ಆದರೆ ಬದಲಾವಣೆಗೆ ನಾವು ವಿರೋಧ ಒಡ್ಡುತ್ತೇವೆ. ಅದರಿಂದಾಗಿಯೇ ನಾವು ಹೇಗಿದ್ದೇವೋ ಹಾಗೆಯೇ ಉಳಿಯುತ್ತೇವೆ. ಇದು ಸತ್ಯದ ವಿಷಯ.

ಧ್ಯಾನದ ಸಹಾಯದಿಂದ ನಮ್ಮಲ್ಲಿ ಬದಲಾವಣೆ ತರುವ ಪೂರ್ಣ ಪ್ರಕ್ರಿಯೆಯನ್ನು ನಾವು ಅರ್ಥಮಾಡಿಕೊಳ್ಳಲು ಪ್ರಯತ್ನಿಸೋಣ. ಧ್ಯಾನ ಮಾಡುವಾಗ ನಮ್ಮ ಶಾರೀರಿಕ ವ್ಯವಸ್ಥೆಯಲ್ಲಿ ನಿಶ್ಚಲತೆಯನ್ನು ಸ್ಥಾಪಿಸಲು ನಾವು ಪ್ರಯತ್ನಿಸುತ್ತೇವೆ. ನಮ್ಮಲ್ಲಿ ನಿಶ್ಚಲತೆ ಸ್ಥಾಪನೆಯಾದಾಗ, ನಮ್ಮ ಅರಿವು ನಮ್ಮ ಶಾರೀರಿಕ ವ್ಯವಸ್ಥೆಯಾದ ದೇಹ, ಮನಸ್ಸು ಮತ್ತು ಬುದ್ಧಿಯಿಂದ ಬಿಡುಗಡೆ ಹೊಂದಿ ಪ್ರಜ್ಞೆಯ ಉನ್ನತ ಪದರಗಳನ್ನು ತಲುಪಿ ನಂತರ ಅದು ವಿಸ್ತಾರಗೊಳ್ಳುತ್ತದೆ. ಈ ವಿಸ್ತಾರಗೊಂಡ ಅನುಭವ ನಮ್ಮಲ್ಲಿ ಅನೇಕ ಪ್ರಯೋಜನಗಳನ್ನು ತಂದುಕೊಡುತ್ತದೆ. ನಾವು ಅದ್ಭುತ ಚೈತನ್ಯಗಳನ್ನು, ಅಪಾರ ವಿವೇಕವನ್ನು ಮತ್ತು ಅಂತಃಶಕ್ತಿಯನ್ನು ಪಡೆಯುತ್ತೇವೆ. ಧ್ಯಾನದಲ್ಲಿ ನಾವು ದೇವರ ಅನುಭವ ಪಡೆಯುತ್ತೇವೆ – ಪೂರ್ತಿಯಲ್ಲದಿದ್ದರೂ ಸ್ವಲ್ಪ ಪ್ರಮಾಣದಲ್ಲಿ ಅವನನ್ನು ಅನುಭವಿಸುತ್ತೇವೆ. ಧ್ಯಾನದಲ್ಲಿ ನಿಶ್ಚಲತೆಯನ್ನು ಸ್ಥಾಪಿಸಿದಾಗ, ನಾವು ದೇವರನ್ನು ಮುಟ್ಟುತ್ತೇವೆ, ಅವನ ಹತ್ತಿರ ಹೋಗುತ್ತೇವೆ. ಸಹಜವಾಗಿಯೇ ದೇವರಿಗೆ ಹತ್ತಿರವಾದ ಅನುಭವ ನಮ್ಮ ಮೇಲೆ ಅದ್ಭುತ ಪರಿಣಾಮ ಬೀರುತ್ತದೆ. ಇದು ಧ್ಯಾನದಲ್ಲಿ ಉಂಟಾಗುತ್ತದೆ. ಧ್ಯಾನದಿಂದ ಹೊರಬಂದಾಗ ನಾವು ಈ ಬದುಕಿಗೆ ಹಿಂದಿರುಗುತ್ತೇವೆ. ನಂತರ ಏನಾಗುತ್ತದೆ ಎನ್ನುವುದು ಮುಖ್ಯ. ಒಂದು ಸರಳ ಉದಾಹರಣೆಯ ಮೂಲಕ ಇದನ್ನು ಚೆನ್ನಾಗಿ ಅರ್ಥಮಾಡಿಕೊಳ್ಳೋಣ:

ನಾವು ಕೋಪದಿಂದ ಪ್ರತಿಕ್ರಿಯಿಸುವ ಸಂದರ್ಭ ಜೀವನದಲ್ಲಿ ಎದುರಾಗಬಹುದು. ಆದರೆ ಧ್ಯಾನ ಮಾಡಿದ ನಂತರ, ದೇವರ ಅನುಭವ ಪಡೆದಿರುವುದರಿಂದ, ನಮ್ಮೊಳಗೆ ಕೆಲವು ಆಂತರಿಕ ಶಕ್ತಿಗಳಿರುತ್ತವೆ, ಅದು ನಾವು ಹಳೆಯ ರೀತಿಯಲ್ಲಿಯೇ ಪ್ರತಿಕ್ರಿಯಿಸದಂತೆ ಮಾಡುತ್ತದೆ. ನಾವು ಈ ಆಂತರಿಕ ಆಧ್ಯಾತ್ಮಿಕ ಶಕ್ತಿಗೆ ಸಹಕರಿಸಬೇಕು. ಈ ಶಕ್ತಿಯನ್ನು ಕಡೆಗಣಿಸಿ ಹಳೆಯ ರೀತಿಯಲ್ಲಿಯೇ ಈಗಲೂ ಪ್ರತಿಕ್ರಿಯಿಸಿದರೆ – ಈ ಪ್ರತಿಕ್ರಿಯೆ ನಮ್ಮ ಅಹಂನಿಂದ ಪ್ರಚೋದಿತವಾಗಿರಬಹುದು – ಆಗ ಧ್ಯಾನದ ಪ್ರಭಾವವು ನಮ್ಮ ಮೇಲೆ ಕೆಲಸ ಮಾಡಲು ನಾವು ಅವಕಾಶಮಾಡಿಕೊಡುತ್ತಿಲ್ಲ ಎಂದರ್ಥ.

ನಾವು ದೇವರನ್ನು ಅನುಭವಿಸಿದಾಗ, ಅದು ಅತ್ಯಂತ ಕಡಿಮೆ ಪ್ರಮಾಣದಲ್ಲಿದ್ದರೂ ಕೂಡ, ಅದು ನಮ್ಮ ಮೇಲೆ ಅಧಿಕ ಪ್ರಭಾವ ಬೀರುತ್ತದೆ. ದೇವರೆಂದರೆ ಸಂಪೂರ್ಣ ಪ್ರೀತಿ, ಸಂಪೂರ್ಣ ಸಕಾರಾತ್ಮಕತೆ, ಸಂಪೂರ್ಣ ಕ್ಷಮಾಶೀಲತೆ. ದೇವರ ಅನುಭವವು ನಾವು ಹೊಂದಿರಬಹುದಾದ ಯಾವುದೇ ನಕಾರಾತ್ಮಕತೆಯನ್ನು ತೊಡೆದುಹಾಕುತ್ತದೆ. ನಂತರ ನಾವಾಗಿಯೇ ಮತ್ತೊಮ್ಮೆ ಅದನ್ನು ಆಹ್ವಾನಿಸುವ ತನಕ ಯಾವುದೇ ನಕಾರಾತ್ಮಕತೆಯು ನಮ್ಮನ್ನು ಮುಟ್ಟುವುದಿಲ್ಲ. ಆದರೆ ನಾವು ಈ ಜನ್ಮದಲ್ಲಿ ಅಥವ ಮುಂಚಿನ ಜನ್ಮಗಳಲ್ಲಿ, ಅಹಂನಿಂದ ಪ್ರಚೋದನೆಗೊಂಡ ರೀತಿಯಲ್ಲಿ ಸನ್ನಿವೇಶಗಳಿಗೆ ಪ್ರತಿಕ್ರಿಯಿಸುವ ಅಭ್ಯಾಸವನ್ನು ಬೆಳೆಸಿಕೊಂಡಿರಬಹುದು. ಅಹಂನಿಂದಾಗುವ ಈ ಪ್ರಚೋದನೆಯನ್ನು ನಾವು ಪ್ರಜ್ಞಾಪೂರ್ವಕವಾಗಿ ನಿರ್ಲಕ್ಷಿಸಬೇಕು ಮತ್ತು ಆಂತರಿಕ ಆಧ್ಯಾತ್ಮಿಕ ಶಕ್ತಿಯ ಸಲಹೆಯನ್ನು ಒಪ್ಪಿಕೊಳ್ಳಬೇಕು. ಆಗ ನಮ್ಮ ಪ್ರತಿಕ್ರಿಯೆಯು ಅತ್ಯಂತ ಸಮಂಜಸವಾಗಿರುತ್ತದೆ, ಆಧ್ಯಾತ್ಮಿಕವಾಗಿರುತ್ತದೆ.

ಹೀಗೆ ಧ್ಯಾನವು ನಮಗೆ ಸಹಾಯಮಾಡುತ್ತದೆ. ನಮ್ಮಲ್ಲಿ ಬದಲಾವಣೆಯನ್ನು ತರಲು ಧ್ಯಾನವು ಸಹಾಯ ಮಾಡಿದರೂ ಕೂಡ, ಅಂತಿಮವಾಗಿ ಪ್ರಜ್ಞಾಪೂರ್ವಕ ಪ್ರಯತ್ನಗಳ ಮೂಲಕ ನಮ್ಮಲ್ಲಿ ಬದಲಾವಣೆಯಾಗುವಂತೆ ಮಾಡುವವರು ನಾವೇ. ಪ್ರಜ್ಞಾಪೂರ್ವಕ ಪ್ರಯತ್ನಗಳನ್ನು ಮಾಡದಿದ್ದರೆ, ಗಂಟೆಗಟ್ಟಲೆ ಅಥವ ವರ್ಷಾನುಗಟ್ಟಲೆ ಧ್ಯಾನಮಾಡಿದರೂ ಕೂಡ ನಾವು ಬದಲಾಗದಿರಬಹುದು. ನಾವು ಪ್ರಯತ್ನಗಳನ್ನು ಮಾಡಿದರೆ, ನಿಧಾನವಾಗಿ ಬದಲಾಗುತ್ತೇವೆ. ಆಧ್ಯಾತ್ಮಿಕವಾಗಿ ಬೆಳೆಯುವುದು ಹೀಗೇ. ಈ ಬೆಳವಣಿಗೆಯು ನಾವು ಬೆಳಕನ್ನು ಪೂರ್ತಿಯಾಗಿ ಅಭಿವ್ಯಕ್ತಿಸುವವರೆಗೂ ಮತ್ತು ನಾವೇ ಬೆಳಕಾಗುವವರೆಗೂ ಮುಂದುವರೆಯುತ್ತದೆ. ಅದಕ್ಕಾಗಿಯೇ ಗುರೂಜಿಯವರು, "ಧ್ಯಾನ ಮತ್ತು ಸಕಾರಾತ್ಮಕತೆಗಳೆರಡೂ ಸಮಾನಾಂತರವಾಗಿ ನಡೆಯಬೇಕು," ಎಂದು ಸಾವಿರಾರು ಬಾರಿ ಹೇಳಿದ್ದರು.

ಧ್ಯಾನ ಮಾಡಿದಾಗ, ನಾವು ಬಹಳ ಚೈತನ್ಯಗಳನ್ನು ಪಡೆಯುತ್ತೇವೆ. ವಾಸ್ತವದಲ್ಲಿ ಇವು ನಮ್ಮನ್ನು ಬದಲಾಯಿಸಬೇಕು, ಆದರೆ ನಾವು ಬದಲಾಗದಿದ್ದರೆ ಅಂತಿಮವಾಗಿ ನಾವು ಈ ಚೈತನ್ಯಗಳನ್ನು ಕಳೆದುಕೊಳ್ಳುತ್ತೇವೆ. ನಾವು ನಮ್ಮಲ್ಲಿ ಬದಲಾವಣೆಗಳನ್ನು ತಂದುಕೊಳ್ಳದಿದ್ದರೆ ಈ ಚೈತನ್ಯಗಳನ್ನು ನಮ್ಮಲ್ಲಿ ಇಟ್ಟುಕೊಳ್ಳಲಾಗುವುದಿಲ್ಲ. ಚೈತನ್ಯಗಳಿಗೆ ತಮ್ಮದೇ ಆದ ಬುದ್ಧಿಶಕ್ತಿಯಿರುತ್ತದೆಯೆಂದು ಗುರೂಜಿಯವರು ಹೇಳುತ್ತಿದ್ದರು. ಎಲ್ಲಿ ಇರಬೇಕು ಯಾರೊಂದಿಗೆ ಇರಬೇಕು ಎನ್ನುವುದನ್ನು ಅವು ನಿರ್ಧರಿಸುತ್ತವೆ. ಈ ವಿಷಯವನ್ನು ಸ್ಪಷ್ಟವಾಗಿ ವಿವರಿಸಲು ಉದಾಹರಣೆಯೊಂದನ್ನು ಕೊಡುತ್ತೇನೆ. ನಮಗೆ ತಿಳಿದಿದೆ, ಇಲ್ಲಿನ ತರಗತಿಗಳಲ್ಲಿ ಮಾಸ್ಟರ್‌ಗಳು ತಮ್ಮ ಸೂಕ್ಷ್ಮ ರೂಪಗಳಲ್ಲಿ ಬಂದು ತಮ್ಮ ಇರುವಿಕೆಯಿಂದ ನಮ್ಮನ್ನು ಅನುಗ್ರಹಿಸುತ್ತಾರೆ. ಅವರು ಬಂದಾಗಲೆಲ್ಲಾ ನಮಗೆ ಅದ್ಭುತ ಚೈತನ್ಯಗಳನ್ನು ಹರಿಸುತ್ತಾರೆ. ಗುರೂಜಿಯವರು ಅನೇಕ ಬಾರಿ ಹೇಳುತ್ತಿದ್ದರು, 'ನೀವೀಗ ಅದ್ಭುತ ಚೈತನ್ಯಗಳನ್ನು ಪಡೆದಿರುವುದರಿಂದ, ಶಾಂತವಾಗಿಯೇ ಇರಿ. ಸ್ವಲ್ಪ ಸಮಯದವರೆಗೆ ಶಾಂತವಾಗಿರುವುದಲ್ಲ, ಎಲ್ಲ ಸಮಯದಲ್ಲೂ ಶಾಂತವಾಗಿರಿ.' ನಾವು ಯಾವಾಗಲೂ ಶಾಂತವಾಗಿರಬೇಕು, ಅದು ಒಂದನೇ ಶಂಬಲ ನಿಯಮಕ್ಕೆ ಸಂಬಂಧಿಸಿದ ವಿಶೇಷ ಸೂಚನೆ ಕೂಡ. ಕೋಪ ಆಸ್ಫೋಟಿಸಲು ನೀವು ಒಮ್ಮೆ ಅವಕಾಶ ಕೊಟ್ಟರೂ, ಋಷಿಗಳು ನಿಮಗೆ ಹರಿಸಿರುವ ಈ ಅದ್ಭುತ ಚೈತನ್ಯಗಳನ್ನು ಕಳೆದುಕೊಳ್ಳುತ್ತೀರಿ, ಎಂದು ಗುರೂಜಿಯವರು ನಮಗೆ ಹೇಳುತ್ತಿದ್ದರು. ಅದರ ಅರ್ಥವೇನೆಂದರೆ, ಬದಲಾಗಲು ಸಾಧ್ಯವಾಗದಿದ್ದರೆ, ನಮಗೆ ಈ ಚೈತನ್ಯಗಳನ್ನು ನಮ್ಮಲ್ಲಿಟ್ಟುಕೊಳ್ಳಲು ಸಾಧ್ಯವಾಗುವುದಿಲ್ಲ. ಆದ್ದರಿಂದಲೇ ಧ್ಯಾನವೊಂದೇ ಸಾಕಾಗುವುದಿಲ್ಲ.

ಜನರು ನನ್ನನ್ನು ಭೇಟಿಯಾದಾಗ ಅನೇಕ ಬಾರಿ ಈ ಪ್ರಶ್ನೆಯನ್ನು ಕೇಳುತ್ತಾರೆ, "ನನ್ನ ಸಾಧನೆಯನ್ನು ಉತ್ತಮಪಡಿಸಿಕೊಳ್ಳಲು ಬೇರೆ ಏನನ್ನು ಮಾಡಬೇಕು? ಶೀಘ್ರವಾಗಿ ಪ್ರಗತಿ ಹೊಂದುವುದು ಹೇಗೆ?" ಗುರೂಜಿಯವರು ನಮಗೆ ಹೇಳುತ್ತಿದ್ದುದನ್ನು ಮಾತ್ರವೇ ನಾನು ಸೂಚಿಸಬಹುದು. ಗುರೂಜಿಯವರು ಯಾವಾಗಲೂ ಹೆಚ್ಚು ಪ್ರೀತಿಯನ್ನು ಅಭಿವ್ಯಕ್ತಿಸಲು ಹೇಳುತ್ತಿದ್ದರು. "ನೀವು ಪ್ರೀತಿಯನ್ನು ಅಭಿವ್ಯಕ್ತಿಸುತ್ತಿದ್ದರೆ, ಅದು ಒಳ್ಳೆಯದು. ಇನ್ನೂ ಹೆಚ್ಚು ಪ್ರೀತಿಯನ್ನು ಅಭಿವ್ಯಕ್ತಿಸಿ. ನೀವು ಹೆಚ್ಚು ಪ್ರೀತಿಯನ್ನು ಅಭಿವ್ಯಕ್ತಿಸುತ್ತಿದ್ದರೆ, ಅದು ಬಹಳ ಒಳ್ಳೆಯದು, ಅದಕ್ಕಿಂತಲೂ ಹೆಚ್ಚು ಪ್ರೀತಿಯನ್ನು ಅಭಿವ್ಯಕ್ತಿಸಿ," ಎಂದು ಅವರು ಹೇಳುತ್ತಿದ್ದರು. ಅವರು ಹೇಳುತ್ತಿದ್ದರು, "ದೇವರನ್ನು ಮತ್ತು ಗುರುವನ್ನು ಹೆಚ್ಚು ಪ್ರೀತಿಸಬೇಕು. ಯಾವುದೇ ಅಭ್ಯಾಸಗಳನ್ನು ಮಾಡುತ್ತಿದ್ದರೂ, ಆ ಅಭ್ಯಾಸಗಳಿಗೆ ಹೆಚ್ಚು ಪ್ರೀತಿ ಸೇರಿಸಿ; ಅಭ್ಯಾಸಗಳನ್ನು ಹೆಚ್ಚು ಗಾಢವಾಗಿ ಮಾಡಿ." ಅಂತೆಯೇ ಅವರು ಹೇಳುತ್ತಿದ್ದರು, "ನಿಮ್ಮ ಬದುಕಿಗೆ ಹೆಚ್ಚು ಪ್ರೀತಿ ಸೇರಿಸಿ." ಸಾಧನೆಯನ್ನು ಉತ್ತಮಗೊಳಿಸಲು ಇರುವ ದಾರಿ ಇದೊಂದೇ. ■

## ಹೊರಗಿನವರಿಗೆ ಧ್ಯಾನಕಲಿಕೆ

ಧ್ಯಾನದ ತರಗತಿಗಳಿಗೆ ಬರಲು ಸಾಧ್ಯವಿಲ್ಲದಿರು – ವವರಿಗೆ ಅಂಚೆ ಮತ್ತು ಇ–ಮೇಲ್‌ಗಳ ಮೂಲಕ ಧ್ಯಾನ ಕಲಿಸಲಾಗುವುದು. ಇಂಗ್ಲೀಷ್‌ನಲ್ಲಿ (ವರ್ಷಕ್ಕೆ ರೂ. 2500), ಕನ್ನಡ, ಮರಾಠಿ ಮತ್ತು ಹಿಂದಿಯಲ್ಲಿ (ವರ್ಷಕ್ಕೆ ರೂ. 1300) ಪಾಠಗಳನ್ನು ಕಳುಹಿಸಲಾಗುವುದು. ಭಾರತ ದೇಶದಿಂದ ಹೊರಗೆ ವಾಸವಾಗಿರುವ ವಿದ್ಯಾರ್ಥಿಗಳ ವಾರ್ಷಿಕ ರಿಜಿಸ್ಟ್ರೇಶನ್ ಫೀಯು ರೂ. 4500. ಈ ಫೀನಲ್ಲಿ ವಾರ್ತಾಪತ್ರದ ಒಂದು ವರ್ಷದ ಚಂದಾದಾರಿಕೆ ಮತ್ತು ಪಠ್ಯಪುಸ್ತಕಗಳು ಸೇರಿದೆ.

ನಂತರ, ರಿಜಿಸ್ಟ್ರೇಶನ್‌ನ ವಾರ್ಷಿಕ ನವೀಕರಣದ ಫೀ ಇಂಗ್ಲೀಷ್ (ವರ್ಷಕ್ಕೆ ರೂ. 2000), ಕನ್ನಡ, ಮರಾಠಿ ಮತ್ತು ಹಿಂದಿಯಲ್ಲಿ (ವರ್ಷಕ್ಕೆ ರೂ. 900). ಭಾರತ ದೇಶದಿಂದ ಹೊರಗೆ ವಾಸವಾಗಿರುವ ವಿದ್ಯಾರ್ಥಿಗಳ ರಿಜಿಸ್ಟ್ರೇಶನ್‌ನ ವಾರ್ಷಿಕ ನವೀಕರಣದ ಫೀಯು ರೂ. 3500. ಈ ಫೀನಲ್ಲಿ ವಾರ್ತಾಪತ್ರದ ಒಂದು ವರ್ಷದ ಚಂದಾದಾರಿಕೆ ಸೇರಿದೆ.

- ★ ಎಲ್ಲಾ ಸೂಚನೆಗಳನ್ನು ಪೋಸ್ಟ್ ಅಥವಾ ಇ–ಮೇಲ್ ಮೂಲಕ (ಆಯ್ಕೆ ಮಾಡಿದಂತೆ) ಆಯಾ ಭಾಷೆಯಲ್ಲಿ ಕಳುಹಿಸಿ ಕೊಡಲಾಗುವುದು.
- ★ ಸೂಕ್ಷ್ಮ ಮಟ್ಟದಲ್ಲಿ, ಋಷಿಗಳು ದೀಕ್ಷೆಯನ್ನು ಕೊಡುತ್ತಾರೆ ಮತ್ತು ಸಾಧನೆಯ ಪ್ರಗತಿಯನ್ನು ಗಮನಿಸುತ್ತಾರೆ.
- ★ ನಮ್ಮ ಮಾರ್ಗ ಮತ್ತು ಸಾಧನೆಯನ್ನು ಸರಿಯಾಗಿ ಅರ್ಥಮಾಡಿಕೊಳ್ಳಲು ವಿದ್ಯಾರ್ಥಿಗಳು ನಮ್ಮ ಎಲ್ಲ ಪುಸ್ತಕಗಳನ್ನು ಓದಬೇಕು.
- ★ ಅಭ್ಯಾಸದ ವರದಿಗಳನ್ನು ಸಕಾಲಕ್ಕೆ ತಲುಪಿಸಬೇಕು. ಸಕಾಲಕ್ಕೆ ವರದಿ ಬಾರದಿದ್ದರೆ, ವಿದ್ಯಾರ್ಥಿ ಧ್ಯಾನ ಮಾಡುತ್ತಿಲ್ಲ ಎಂದು ಪರಿಗಣಿಸಲಾಗುತ್ತದೆ.

**ಚೆಕ್/ಡಿಡಿಗಳನ್ನು 'Manasa Light Age Foundation' ಹೆಸರಲ್ಲಿ ಕಳುಹಿಸಬೇಕಾಗುತ್ತದೆ. ಬೆಂಗಳೂರೇತರ ಚೆಕ್‌ಗಳಿಗೆ 50ರೂ. ಹೆಚ್ಚಿಗೆ ಸೇರಿಸಬೇಕಾಗುತ್ತದೆ.**

### ಗುರೂಜಿಯವರಿಂದ ವಿಶೇಷ ಸೂಚನೆಗಳು

- ★ ತಾಳ್ಮೆ ಇರಲಿ. ಮೊದಲನೆಯ ದಿನವೇ ಸಮಾಧಿಯ ಅನುಭವವನ್ನು ನಿರೀಕ್ಷಿಸಬೇಡಿ. ಪವಾಡಗಳನ್ನು ನಿರೀಕ್ಷಿಸಬೇಡಿ. ನಾವು ಶ್ರದ್ಧೆಯಿಂದ ಸಾಧನೆಯನ್ನು ಮುಂದುವರಿಸಿದರೆ ಪವಾಡಗಳು ಸದ್ದಿಲ್ಲದೆ ನಡೆಯುತ್ತವೆ.
- ★ ಪ್ರತಿಯೊಬ್ಬರೂ ತಮ್ಮದೇ ರೀತಿಯಲ್ಲಿ ಸೆಣಸಾಟಗಳನ್ನೆದುರಿಸುತ್ತಾರೆ. ಆದರೆ ಸಾಧನೆ ಮುಂದುವರಿದಂತೆ ಎಲ್ಲ ಕರಗಿಹೋಗುತ್ತವೆ.
- ★ ಪ್ರತಿಯೊಬ್ಬರಿಗೂ ತಮ್ಮದೇ ಆದ ಅನುಭವಗಳಾಗುತ್ತವೆ. ಆದರೆ ಅವುಗಳ ಕಡೆ ಹೆಚ್ಚು ಗಮನ ಕೊಡಬಾರದು. ಅನುಭವಗಳು ಒಳ್ಳೆಯದು. ಆದರೆ ಅವು ಸಾಧನೆಯಲ್ಲಿ ಪ್ರಗತಿಯನ್ನು ಅಳೆಯುವುದಿಲ್ಲ.
- ★ ಧ್ಯಾನ ಮಾಡುವಾಗ, ಧ್ಯಾನದ ಕ್ರಿಯೆಗಳನ್ನು ವಿಶ್ಲೇಷಿಸಬಾರದು. ವಿಶ್ಲೇಷಣೆ ಧ್ಯಾನಕ್ಕೆ ಸಹಾಯ ಮಾಡುವುದಿಲ್ಲ.
- ★ ಧ್ಯಾನ ಮಾಡುವಾಗ, ಯೋಚನೆಗಳು ಸಾಮಾನ್ಯ. ಅದರಿಂದ ತಲೆಕೆಡಿಸಿ ಕೊಳ್ಳಬಾರದು. ಯೋಚನೆಗಳನ್ನು ಓಡಿಸಲು ಪ್ರಯತ್ನ ಮಾಡಬಾರದು. ಅವುಗಳನ್ನು ಗಮನಿಸದೆ ಇರುವುದು ಉತ್ತಮ. ಬೇರೆ ದಾರಿಯೇ ಇಲ್ಲ.

## ಗುರೂಜಿಯವರಿಗೆ ಎಲ್ಲವೂ ತಿಳಿದಿತ್ತು

ನೆಡು ದೊರ್ರೈ; ಅನು: ಪಾಂಡುರಂಗ

ಗುರೂಜಿಯವರ ಸಂದೇಶಗಳು ಯಾವಾಗಲೂ ಸರಳವಾಗಿರುತ್ತಿದ್ದವು. ಗುರೂಜಿಯವರನ್ನು ತಪ್ಪಾಗಿ ಅರ್ಥಮಾಡಿಕೊಳ್ಳದಿರುವುದು ನಮಗೆ ಬಹಳ ಮುಖ್ಯ. ಉದಾಹರಣೆಗೆ, ಅವರು ಹೇಳಿದ್ದರು – "ಆಧ್ಯಾತ್ಮಿಕತೆ ಅಂದರೆ ಒಳ್ಳೆಯವರಾಗಿ ಇರುವುದು; ನಮ್ಮತೆ ನಮ್ಮ ಅಧ್ಯಾತ್ಮಿಕ ಪ್ರಗತಿಯ ಮಾಪನ; ಒಂದು ಚೂರು ಹೊಟ್ಟೆ ಕಿಚ್ಚು ಪರವಾಗಿಲ್ಲ; ನಮಗೆ ಸೌಕರ್ಯಗಳನ್ನು ಪಡೆದುಕೊಳ್ಳುವುದಕ್ಕೆ ಸಾಧ್ಯವಾಗುವುದಾದರೆ, ಅವುಗಳನ್ನು ಅನುಭವಿಸುವುದರಲ್ಲಿ ತಪ್ಪೇನಿಲ್ಲ; ಸಮತೋಲನ ಜೀವನ ವಿಧಾನವನ್ನು ಅನುಸರಿಸಿ." 'ಆಧ್ಯಾತ್ಮಿಕತೆ'ಯ ಅರ್ಥವನ್ನು ಇಷ್ಟು ಸರಳವಾಗಿ ಮತ್ತು ಇಷ್ಟೊಂದು ಸ್ಪಷ್ಟತೆಯಿಂದ ವಿವರಿಸಿ ಹೇಳಿರುವ ಬೇರೆ ಯಾರನ್ನೂ ನಾನು ನೋಡಿಲ್ಲ. ಆದರೆ, ಕೆಲವು ಸಲ ಸರಳವಾದ ವಿಷಯಗಳನ್ನು ನಾವು ಸುಲಭವಾಗಿ ಒಪ್ಪಿಕೊಳ್ಳುವುದಿಲ್ಲ.

ನನ್ನ ಮನಸ್ಸಿನಲ್ಲಿ ಪ್ರಶ್ನೆ ಮೂಡಿದಾಗ, ನಾನು ಮಾನಸಿಕವಾಗಿ ಗುರೂಜಿಯವರನ್ನು ಕೇಳುತ್ತಿದ್ದೆ. ಆ ಪ್ರಶ್ನೆಗೆ ಗುರೂಜಿಯವರು ಮುಂದಿನ ಭಾನುವಾರದ ತರಗತಿಯಲ್ಲಿ, ತಮ್ಮ ಭಾಷಣದಲ್ಲಿ ಉತ್ತರಿಸುತ್ತಿದ್ದರು! ಇದು ಬಹಳ ವಿಸ್ಮಯಕರವಾಗಿತ್ತು! ಈ ರೀತಿ ಪದೇ ಪದೇ ಆಗುತ್ತಿದ್ದುದರಿಂದ ಇದು ಕಾಕತಾಳೀಯವಲ್ಲವೆಂದು ಅರಿತುಕೊಂಡೆ. "ನಾನು ಮಾನಸಿಕವಾಗಿ ಕೇಳಿದ ಪ್ರಶ್ನೆ ಗುರೂಜಿಯವರಿಗೆ ಹೇಗೆ ಗೊತ್ತಾಗುತ್ತದೆ?" ಎಂದು ನಾನು ಯಾವಾಗಲೂ ಆಶ್ಚರ್ಯಚಕಿತನಾಗುತ್ತಿದ್ದೆ. ಗುರೂಜಿಯವರು ಒಬ್ಬ ಋಷಿಯಾಗಿದ್ದರು ಹಾಗೂ ಅವರಿಗೆ ಎಲ್ಲವೂ ತಿಳಿದಿತ್ತು ಎಂದು ಅರಿತುಕೊಂಡೆ.

ನಾವು ಗುರೂಜಿಯವರ ಗಮನಕ್ಕೆ ತಂದ ಯಾವುದೇ ಸಮಸ್ಯೆಯಲ್ಲಿ ಅವರು ಸಕಾರಾತ್ಮಕ ಅಂಶಗಳನ್ನು ಹುಡುಕುತ್ತಿದ್ದರು. ಅವರು ಯಾವಾಗಲೂ ಯಾವುದೇ ಸಮಸ್ಯೆಯನ್ನು ದೂರದಿಂದ ಅವಲೋಕಿಸಿ, ಸರಳವಾದ ಪರಿಹಾರಗಳನ್ನು ಸೂಚಿಸುತ್ತಿದ್ದರು. ಅವರು ಒಂದೇ ಪದದಲ್ಲಿ ಅಥವಾ ಒಂದು ಸರಳ ವಾಕ್ಯದಲ್ಲಿ ಬಹಳ ಪರಿಣತಿಯಿಂದ ಉತ್ತರಿಸುತ್ತಿದ್ದರು! ನಾವು ಮಾಡಬೇಕಾದದ್ದೆಂದರೆ, ಕಣ್ಣುಮುಚ್ಚಿಕೊಂಡು ಅವರನ್ನು ನಂಬುವುದು ಹಾಗೂ ಅವರ ಮಾರ್ಗದರ್ಶನದಂತೆ ನಡೆಯುವುದು. ಗುರೂಜಿಯವರ ಮಾರ್ಗ ದರ್ಶನಕ್ಕನುಸಾರವಾಗಿ ನಾನು ತೆಗೆದುಕೊಂಡ ನಿರ್ಧಾರದಿಂದ ನಾನೆಂದೆಂದಿಗೂ ವಿಷಾದಪಡಲಿಲ್ಲ! ನಮಗೆ ಉತ್ತಮವಾದುದು ಯಾವುದೆಂದು ಅವರಿಗೆ ತಿಳಿದಿತ್ತು.

ಪ್ರಾರಂಭದಲ್ಲಿ ಅವರನ್ನು ಅರ್ಥ ಮಾಡಿಕೊಳ್ಳುವುದಕ್ಕೆ ನನಗೆ ಸ್ವಲ್ಪ ಸಮಯ ಬೇಕಾಯಿತು. ನಾನು ಆಧ್ಯಾತ್ಮಿಕತೆಯನ್ನು ಬೇರೆ ವಿಧವಾಗಿ ಅರ್ಥಮಾಡಿಕೊಂಡಿದ್ದೆ. ನನ್ನ ಪ್ರಕಾರ ಆಧ್ಯಾತ್ಮಿಕತೆ ಅಂದರೆ ಕೇಸರಿ ಬಣ್ಣದ ಉಡುಪನ್ನು ಧರಿಸುವುದು; ಕಾಡಿಗೆ ಹೋಗಿ ತಪಸ್ಸು ಮಾಡುವುದು. ಆದರೆ ಈಗ ನಾನು ಅನೇಕ ವಿಷಯಗಳನ್ನು ಅರ್ಥ ಮಾಡಿಕೊಂಡಿದ್ದೇನೆ, ಗುರೂಜಿಯವರಿಗೆ ನನ್ನ ಕೃತಜ್ಞತೆಗಳು. ಈ ಭೂಮಿಯ ಮೇಲಿನ ಜೀವನವನ್ನು ಅನುಭವಿಸಲು ನಾವು ಇಲ್ಲಿಗೆ ಬಂದಿರುವುದು ಹಾಗೂ ತದನಂತರ ನಮ್ಮ ಮೂಲ ಸ್ಥಾನಕ್ಕೆ ವಾಪಸ್ಸು ಹೋಗಬೇಕಾಗಿರುವುದನ್ನು ನಾನು ಅರ್ಥ ಮಾಡಿಕೊಂಡಿದ್ದೇನೆ. ಇದಕ್ಕಾಗಿ ಬಹಳ ಸುಲಭದ ದಾರಿಯೆಂದರೆ ಧ್ಯಾನ ಮಾಡುವುದು ಮತ್ತು ಸಕಾರಾತ್ಮಕರಾಗುವುದು, ಕರ್ಮಮುಕ್ತರಾಗಿ ಬೆಳಕಿನಲ್ಲಿ ಲೀನವಾಗುವುದು! ■

## ನಾವು ಅವರನ್ನು ಕಳೆದುಕೊಂಡಿರುವೆವೆ?

ಕಾರ್ತಿಕ್. ಎನ್; ಅನು: ಸುಧಾಕರ್

ಅನೇಕ ಜನರು ಗುರೂಜಿಯವರನ್ನು ಭೇಟಿಮಾಡಲು ಬರುತ್ತಿದ್ದರು. ಜನರನ್ನು ಭೇಟಿ ಮಾಡಲು, ಅವರ ಮಾತುಗಳನ್ನು ಕೇಳಿಸಿಕೊಳ್ಳಲು ಮತ್ತು ಪ್ರೀತಿಯನ್ನು ಮತ್ತು ಋಷಿಗಳ ಬೆಳಕನ್ನು ಕೊಡಲು ಅವರು ಇಚ್ಛಿಸುತ್ತಿದ್ದರು. ಕೆಲವರು ತಮ್ಮ ಸಮಸ್ಯೆಗಳನ್ನು ಹೇಳಿಕೊಳ್ಳಲು ಮತ್ತು ಇತರರು ತಮ್ಮ ಅನುಭವಗಳನ್ನು ಹಂಚಿಕೊಳ್ಳಲು ಬರುತ್ತಾರೆಂದು ಅವರು ಹೇಳುತ್ತಿದ್ದರು. ಕೆಲವರು ಋಷಿಗಳಿಂದ ಸೂಚನೆಗಳನ್ನು ಪಡೆಯಲು ಬರುತ್ತಿದ್ದರು ಮತ್ತೆ ಕೆಲವರು ಹರಟೆ ಹೊಡೆಯಲು ಬರುತ್ತಿದ್ದರು! ದರ್ಶನ ಪಡೆಯಲೆಂದೇ ಅನೇಕರು ಬರುತ್ತಿದ್ದರು. ಅವರು ಎಲ್ಲ ರೀತಿಯ ಜನರನ್ನೂ ಭೇಟಿಯಾಗುತ್ತಿದ್ದರು. ಜನರು ಅವರೊಂದಿಗೆ ಹೇಗೆ ಸಂಬಂಧವನ್ನು ಹೊಂದಿದ್ದರು ಎಂದು ಗಮನಿಸುವುದು ಬಹುಶಃ ಸುಲಭ. ಆದರೆ ಗುರೂಜಿಯವರು ಯಾವ ದೃಷ್ಟಿಕೋನಗಳಿಂದ ನಮ್ಮೊಂದಿಗೆ ಸಂಪರ್ಕ ಹೊಂದಿದ್ದರು ಎಂದು ಗ್ರಹಿಸುವುದು ಬಹಳ ಕಷ್ಟ. ಗುರೂಜಿಯವರು ಒಬ್ಬ ಬೋಧಕ, ಪಿತೃ, ಮಾರ್ಗದರ್ಶಿ, ಸ್ನೇಹಿತ, ಗುರು, ಚಾನಲ್ ಮತ್ತು ಇನ್ನೂ ಅನೇಕ ಆಗಿದ್ದರು. ಈ ಸೃಷ್ಟಿಯಲ್ಲಿರುವ ಮಹತ್ತರವಾದ ಮತ್ತು ಸಕಾರಾತ್ಮಕವಾದ ಎಲ್ಲದರ ಸಮೃದ್ಧತೆಯೇ ಅವರಾಗಿದ್ದರು. ಅವರು ಏಕಕಾಲದಲ್ಲಿ ಮಾನವರು ಮತ್ತು ದೈವವೂ ಆಗಿದ್ದರು. ಅವರು ಯಾವಾಗಲೂ ಆಳವಾಗಿ ದೇವರಲ್ಲಿ ಬೇರೂರಿದ್ದರು ಮತ್ತು ಋಷಿಗಳ ಅಪಾರವಾದ ಬೆಳಕನ್ನು ಹೊಂದಿದ್ದರು.

ಹಳ್ಳಿಯವರಿಂದ ಹಿಡಿದು ಗಂಭೀರ ಸಾಧಕರವರೆಗೆ ಎಲ್ಲರ ಜೊತೆಗಿನ ಅವರ ಸಂಪರ್ಕ, ಎಂದಿಗೂ ಸಾಮಾನ್ಯ ಮಟ್ಟದ್ದಾಗಿರುತ್ತಿರಲಿಲ್ಲ. ಸಾಮಾನ್ಯ ಸಂಪರ್ಕದ ಸಮಯಗಳಲ್ಲೂ ಅವರು ಉನ್ನತ ಆಧ್ಯಾತ್ಮಿಕ ಸತ್ಯಗಳನ್ನು ಹೇಳುತ್ತಿದ್ದರು. ಅವರನ್ನು ಭೇಟಿಮಾಡುವುದು ಅಥವ ಬೇರೊಬ್ಬರು ಅವರನ್ನು ಭೇಟಿಮಾಡುವುದನ್ನು ನೋಡುವುದು ಕೂಡ ಒಂದು ಉನ್ನತ ಅನುಭವವಾಗಿತ್ತು. ನಾವು ಅವರಿಂದ, ಸಾಮಾನ್ಯ ಸಲಹೆಯಿಂದ ಹಿಡಿದು ಸಮಾಧಿಯ ಅನುಭವದವರೆಗೆ ಎಲ್ಲವನ್ನೂ ಪಡೆಯಬಹುದಿತ್ತು. ಇನ್ನೂ ಹೆಚ್ಚಿನದನ್ನು ಕೊಡಲು ಅವರು ಕಾಯುತ್ತಿದ್ದರು, ಆದರೆ ನಮ್ಮ ಪಡೆಯುವ ಸಾಮರ್ಥ್ಯ ಸೀಮಿತವಾಗಿತ್ತು. ಅವರು ನಮ್ಮೊಂದಿಗೆ ಅಷ್ಟೊಂದು ಸಮಯವನ್ನು ಕಳೆದರೂ, ಅಮರರವರು ಮತ್ತು ಋಷಿಗಳಿಂದ ಪಡೆದ ಅಪೂರ್ವ ನಿಧಿಯೆಲ್ಲವನ್ನೂ ನಮಗೆ ಹಸ್ತಾಂತರಿಸಲು ಸಾಧ್ಯವಾಗದುದಕ್ಕೆ ಅವರಲ್ಲಿ ದುಃಖವಿತ್ತು.

ನಾವು ಈಗ ಅವರನ್ನು ಕಳೆದುಕೊಂಡಿರುವೆವೆ? ಈ ಮಟ್ಟದಲ್ಲಿ ಅವರನ್ನು ಸಂಪರ್ಕಿಸಲು ಅವರ ಭೌತಿಕ ದೇಹ ಲಭ್ಯವಿಲ್ಲದಿದ್ದರೂ, ಅವರ ಚೈತನ್ಯಗಳು ಮತ್ತು ಪ್ರೀತಿ ಆ ಕೊರತೆಯನ್ನು ಇನ್ನೂ ಹೆಚ್ಚಾಗಿಯೇ ತುಂಬುತ್ತವೆ. ಪ್ರತಿ ವಾರದ ತರಗತಿಗಳು, ಅವರ ಪುಸ್ತಕಗಳು ಮತ್ತು ವಿಡಿಯೋಗಳ ಮೂಲಕ ಅವರು ತಮ್ಮ ಕಂಪನವನ್ನು ಹೊರಸೂಸುತ್ತಾರೆ. ಅವರ ಕೊನೆಯ ಸಂದೇಶದಲ್ಲಿ, "ಸೂಕ್ಷ್ಮ ಮಟ್ಟದಿಂದ ನಿಮ್ಮೆಲ್ಲರನ್ನೂ ವೈಯಕ್ತಿಕವಾಗಿ ನೋಡಿಕೊಳ್ಳುತ್ತೇನೆ," ಎಂದು ಆಶ್ವಾಸನೆ ನೀಡಿದ್ದರು. ಈ ರೀತಿ ಅವರು ಇನ್ನೂ ಹೆಚ್ಚು ವ್ಯಕ್ತಿಗತವಾಗಿ ನಮ್ಮನ್ನು ಭೇಟಿಯಾಗುವುದನ್ನು ಮುಂದುವರಿಸುತ್ತಿದ್ದಾರೆ! ನಾವು ಮಾಡಬೇಕಾಗಿರುವು ದೆಂದರೆ, ಅವರ ವಿಶ್ವಾತ್ಮಕ ಭಾಗಕ್ಕೆ ಸಂಪರ್ಕ ಹೊಂದಬೇಕು ಮತ್ತು ಅವರ ಬೆಳಕನ್ನು ಅನುಭವಿಸುವುದಕ್ಕೆ ಹೆಚ್ಚು ತೆರೆದುಕೊಳ್ಳಬೇಕು. ಅವರು ಏನನ್ನು ಪ್ರತಿನಿಧಿಸುತ್ತಿದ್ದರು ಎಂಬುದರ ಅರಿವು ನಮಗಾದರೆ ನಾವೆಂದಿಗೂ ಅವರನ್ನು ಕಳೆದುಕೊಳ್ಳುವುದಿಲ್ಲ. ■

## ಪ್ರಶ್ನೆಗಳು ಮತ್ತು ಉತ್ತರಗಳು

ಸಂ: ಶೋಭಾ ಕೆ. ರಾವ್; ಅನು: ಪಾಂಡುರಂಗ

**ಪ್ರ: ಸೂಕ್ಷ್ಮ ಮಟ್ಟದಲ್ಲಿ ಬೆಳಕಿನ ಯುಗ ಸ್ಥಾಪನೆ ಆಗಿದೆಯೇ?**

ಉ: ಇಲ್ಲ. ನಮ್ಮಲ್ಲಿ ಬಹಳ ಸರಳವಾದ ನಿರೂಪಣೆಗಳು ಹಾಗೂ ಸರಳವಾದ ಪರಿಜ್ಞಾನಗಳಿವೆ. ಸೂಕ್ಷ್ಮ ಮಟ್ಟದ ಆಚೆ ಬೇರೆ ಬೇರೆ ಲೋಕಗಳಿವೆ. ಅವುಗಳ ಬಗ್ಗೆ ನಮಗೆ ಹೆಚ್ಚಾಗಿ ಗೊತ್ತಿಲ್ಲ. ಸೂಕ್ಷ್ಮ ಮಟ್ಟದಲ್ಲಿ ಏನಾದರೂ ಸಂಭವಿಸಿದಾಗ ಅದು 72ಗಂಟೆಗಳ ನಂತರ ಭೌತಿಕ ಪ್ರಪಂಚದಲ್ಲಿ ಸಂಭವಿಸುತ್ತದೆ ಎಂದು ನಮಗೆ ತಿಳಿದಿದೆ. ಆದಕಾರಣ ಸೂಕ್ಷ್ಮ ಮಟ್ಟದಲ್ಲಿ ಬೆಳಕಿನ ಯುಗ ಪ್ರಾರಂಭವಾಗಿಲ್ಲ. ಆದರೆ, ಇನ್ನೂ ಉನ್ನತ ಮಟ್ಟದ ಲೋಕಗಳಲ್ಲಿ ಬೆಳಕಿನ ಯುಗ ಈಗಾಗಲೇ ಅಸ್ತಿತ್ವದಲ್ಲಿದೆ. ಆ ಲೋಕದಿಂದ ಋಷಿಗಳು ಕಾರ್ಯ ನಿರ್ವಹಿಸುತ್ತಾರೆ.

**ಪ್ರ: ಸಂಗೀತಗಾರರು ಮತ್ತು ಕಲಾವಿದರು ಗಂಧರ್ವ ಲೋಕದಿಂದ ಬರುತ್ತಾರೆಯೇ?**

ಉ: ಸಂಗೀತಗಾರರು ಗಂಧರ್ವ ಲೋಕದಿಂದ ಬರುತ್ತಾರೆ. ಕಲಾವಿದರು, ಬರಹಗಾರರು, ಬುದ್ಧಿ ಜೀವಿಗಳು, ದಾರ್ಶನಿಕರೂ ಸಹ ಬೇರೆ ಬೇರೆ ಭೂಮಿಗಳಿಂದ ಬರುತ್ತಾರೆ.

**ಪ್ರ: 'ರಾ' ದೇವರು ಮತ್ತು ಪರಬ್ರಹ್ಮ ಇವರಲ್ಲಿ ಯಾರು ಶ್ರೇಷ್ಠರು ?**

ಉ: ಇಬ್ಬರೂ ಶ್ರೇಷ್ಠರೆ.

**ಪ್ರ: ನಾವು ಮಂತ್ರವನ್ನು ಜಪಿಸುವಾಗ ಚೈತನ್ಯಗಳನ್ನು ಪಡೆಯುತ್ತೇವೆಯೇ?**

ಉ: ಹೌದು. ಜಪದಲ್ಲಿ ಮಂತ್ರವನ್ನು ಪುನರುಚ್ಚರಿಸುತ್ತೇವೆ. ನೀವು ಮಂತ್ರವನ್ನು ಪುನರುಚ್ಚರಿಸಿದರೆ, ಆಯಾ ವಲಯದ ಚೈತನ್ಯಗಳ ಜೊತೆ ಸಂಪರ್ಕ ಪಡೆಯುವಿರಿ ಹಾಗೂ ಸಹಜವಾಗಿಯೇ ಚೈತನ್ಯಗಳನ್ನು ಪಡೆಯುವಿರಿ.

**ಪ್ರ: ನಾವು ದೇವರಿಂದ ಪ್ರತ್ಯೇಕವಾಗಿ ಅಸ್ತಿತ್ವದಲ್ಲಿದ್ದೇವೆಯೇ?**

ಉ: ದೇವರು ಎಲ್ಲೆಲ್ಲೂ ಇದ್ದಾನೆ, ಬೆಳಕಾಗಿ, ಪ್ರಜ್ಞೆಯಾಗಿ ಮತ್ತು ತನ್ನದೇ ಆದ ಸೃಷ್ಟಿಯಲ್ಲಿಯೂ ಇದ್ದಾನೆ. ನಮಗೆ ಅರಿವಿರಲಿ ಅಥವಾ ಇಲ್ಲದಿರಲಿ, ನಾವು ಯಾವಾಗಲೂ ದೇವರಲ್ಲಿಯೇ ಜೀವಿಸಿರುತ್ತೇವೆ. ಆದಕಾರಣ ನಾವು ದೇವರಿಂದ ಪ್ರತ್ಯೇಕವಾಗಿ ಇದ್ದೇವೆ ಎಂದು ಹೇಳಲು ಸಾಧ್ಯವಿಲ್ಲ. ನಾವು ಯಾವಾಗಲೂ ಪ್ರತ್ಯೇಕ ವ್ಯಕ್ತಿಗಳಾಗಿ ಅಸ್ತಿತ್ವದಲ್ಲಿರುತ್ತೇವೆ. ನಮ್ಮ ಮೂಲ ಸ್ಥಾನಕ್ಕೆ ಹೋದಾಗಲೂ, ಅಲ್ಲಿಯೂ ಕೂಡ ನಾವು ವ್ಯಕ್ತಿಗತ ಆತ್ಮಗಳಾಗಿ ಅಸ್ತಿತ್ವದಲ್ಲಿರುವುದನ್ನು ಮುಂದುವರಿಸುತ್ತೇವೆ.

**ಪ್ರ: ಮುಕ್ತಿ ಅಂದರೇನು?**

ಉ: ಮೊದಲಿಗೆ, ನಾವು ಆತ್ಮಗಳು, ಮಹಾನ್ ಬೆಳಕಿನ, ದೇವರ ಕಣಗಳು ಎನ್ನುವ ಅರಿವೇ ಮುಕ್ತಿ. ಇಲ್ಲಿಯ ಜೀವನದ ಅನುಭವವನ್ನು ಪಡೆಯಲೆಂದೇ ನಾವು ಕೆಳಗಿಳಿದು ಬಂದಿದ್ದೇವೆ. ನಂತರ ನಾವು ಹಿಂದಿರುಗುತ್ತೇವೆ. ನಮಗೆ ಇಚ್ಛಾ ಸ್ವಾತಂತ್ರ್ಯ ಯಾವಾಗಲೂ ಇರುವುದರಿಂದ, ನಾವು ಯಾವಾಗಲೂ ಸ್ವತಂತ್ರರು, ಹೇಗೋ ಹಲವಾರು ಕಾರಣಗಳಿಂದ, ನಾವು ಇಲ್ಲಿ ಸಿಕ್ಕಿ ಹಾಕಿಕೊಂಡಿದ್ದೇವೆ, ಎನ್ನುವ ಅರಿವೇ ಮೊದಲ ಹಂತದ ಮುಕ್ತಿ. ಎಲ್ಲಾ ರೀತಿಯ ಬಂಧನಗಳಿಂದ ಬಿಡುಗಡೆ ಪಡೆಯುವುದೇ ಮುಕ್ತಿ. ಮುಕ್ತಿಯು, ಅಜ್ಞಾನದಿಂದ ಬಿಡುಗಡೆ, ಎಲ್ಲಾ ಪ್ರಶ್ನೆಗಳಿಂದ ಅಥವಾ ಅನುಮಾನಗಳಿಂದ ಬಿಡುಗಡೆ, ಭಾವೋದ್ವೇಗಗಳಿಂದ ಬಿಡುಗಡೆ, ಯೋಚನೆಗಳಿಂದ ಬಿಡುಗಡೆ, ಒಣ ತರ್ಕಗಳಿಂದ ಹಾಗೂ ಎಲ್ಲಾ ರೀತಿಯ ಇತಿಮಿತಿಗಳಿಂದ ಬಿಡುಗಡೆ ಪಡೆಯುವುದಾಗಿದೆ. ನಂತರ ಮೂಲ ಸ್ಥಾನವನ್ನು ವಾಪಸ್ಸು ಸೇರುವುದು ಕೊನೆಯ ಹಂತವಾಗಿದೆ. ಮುಕ್ತಿಯು ಒಂದು ದೊಡ್ಡ ಪ್ರಕ್ರಿಯೆ. ಮೂಲ ಸ್ಥಾನಕ್ಕೆ ಹೋಗದೆಯೇ, ಇಲ್ಲಿಯೇ ಇರುವಾಗ ಕೂಡ ನಾವು ಮುಕ್ತಿಯನ್ನು ಪಡೆಯಬಹುದು. ಇದು ಬಹಳ ಪ್ರಮುಖವಾದ ಅಂಶ. ಒಮ್ಮೆ ನಮ್ಮ ನಕಾರಾತ್ಮಕ ಗುಣಗಳಿಂದ ಬಿಡುಗಡೆ ಪಡೆದರೆ, ಆಗ, ಕೆಲವೊಂದು ಹಂತದಲ್ಲಿ ನಾವು ಮುಕ್ತಿಯನ್ನು ಪಡೆದಿದ್ದೇವೆ ಎಂದು ಹೇಳಬಹುದು.

**ಪ್ರ: ಮನಸ್ಸು ತನಗೆ ತಾನೇ ಅನುಭವವನ್ನು ಕಲ್ಪಿಸಿಕೊಳ್ಳುತ್ತದೆಯೇ?**

ಉ: ಇಲ್ಲ. ನಾವೇ ಅನುಭವ ಬೇಕೆಂದು ಬಯಸಿದರೆ, ಮನಸ್ಸು ಅದನ್ನು ಅರ್ಥ ಮಾಡಿಕೊಂಡು ಆ ಅನುಭವವನ್ನು ಚಿತ್ರಿಸಿಕೊಡುತ್ತದೆ. ಆದರೆ ಇದು ಕೇವಲ ನಾವು ಬಯಸಿದಾಗ ಅಥವಾ ನಮ್ಮಲ್ಲಿ ಆ ಹಂಬಲವಿದ್ದಾಗ ಮಾತ್ರ ಸಾಧ್ಯ.


**ಪ್ರ: ಕರ್ಮಗಳು ನಮಗೆ ಪಾಠ ಕಲಿಸಲೆಂದೇ ಬರುತ್ತವೆಯೇ?**

ಉ: ಇಲ್ಲ. ನಮ್ಮ ಕರ್ಮಫಲಗಳ ಅನುಭವಗಳನ್ನು ನೀಡಲು ಅವುಗಳು ಬರುತ್ತವೆ. ಕರ್ಮಗಳು ನಮಗೆ ಪಾಠ ಕಲಿಸುವುದಕ್ಕೆಂದು ಬರುವುದಿಲ್ಲ, ಆದರೆ ಅವುಗಳಿಂದ ಬಹಳವಾಗಿ ಕಲಿಯಬಹುದು. ಇದು ನಮಗೆ ಬಿಟ್ಟ ವಿಷಯ. ■

## ನಮ್ಮ ಪ್ರಕಟಣೆಗಳು

| | |
|---|---|
| Doorways to Light | 200/- |
| New Age Realities | 200/- |
| Higher Communication & Other Realities | 100/- |
| Light Body & Other Realities | 100/- |
| Master-Pupil Talks | 60/- |
| Master-Pupil Talks - Vol 2 | 75/- |
| iGuruji Vol 1,3,4 & 7 | each 150/- |
| iGuruji - Vol 2 | 120/- |
| iGuruji - Vol 5 | 100/- |
| iGuruji - Vol 6 | 75/- |
| Living in the Light of My Guru | 220/- |
| How to Meditate | 50/- |
| Dhyana Yoga | 50/- |
| Descent of Soul | 50/- |
| Practising Shambala Principles | 50/- |
| Astral Ventures of A Modern Rishi | 50/- |
| Channelled Knowledge from the Rishis-Vol 2 | 150/- |
| Channelled Knowledge from the Rishis-Vol 3 & 4 | each 200/- |
| Guruji Speaks Part - I & II | each 200/- |
| Guruji Speaks (Vol 3) | 150/- |
| Guruji Speaks (Vol 4) | 250/- |
| Guruji Speaks (Vol 5 & 7) | each 200/- |
| The Book of Reflections - Vol 1 & 2 | each 200/- |
| The Book of Reflections - Vol 3 | 150/- |
| Meditators on Meditations | 75/- |
| Meditators on Experiences | 75/- |
| Meditational Experiences - Vol 1 & 2 | each 150/- |
| Awareness | 60/- |
| Living in Light | 10/- |
| Light | 10/- |
| Quotes from the Rishis - Vol 1 & 2 | each 100/- |
| Pyramid Revelations | 100/- |
| Thus Spoke Guruji Krishnananda - Vol 1 | 200/- |
| Thus Spoke Guruji Krishnananda - Vol 2 | 250/- |
| ಬೆಳಕಿಗೆ ಬಾಗಿಲುಗಳು | 150/- |
| ಋಷಿಗಳಿಂದ ಬಂದ ಜ್ಞಾನ | 150/- |
| ಋಷಿಗಳಿಂದ ಬಂದ ಜ್ಞಾನ – ಭಾಗ 2 | 150/- |
| ಗುರು–ಶಿಷ್ಯರ ಸಂಭಾಷಣೆ | 60/- |
| ಐ–ಗುರೂಜಿ ಭಾಗ 1 | 150/- |
| ಐ–ಗುರೂಜಿ ಭಾಗ 2 | 120/- |
| ಹೊಸ ಯುಗದ ವಾಸ್ತವಗಳು | 120/- |
| ಉನ್ನತ ಸಂಪರ್ಕಗಳು | 100/- |
| ಅನಿಸಿಕೆಗಳು | 120/- |
| ಧ್ಯಾನ ಮಾಡುವುದು ಹೇಗೆ | 50/- |
| ಧ್ಯಾನ ಯೋಗ | 50/- |
| ಆತ್ಮದ ಅವರೋಹಣ | 50/- |
| ಶಂಬಲ ನಿಯಮಗಳ ಅಭ್ಯಾಸ | 50/- |
| ಆಧುನಿಕ ಋಷಿಯೊಬ್ಬರ ಅತೀಂದ್ರಿಯ ಸಾಹಸಗಳು | 50/- |
| ಗುರೂಜಿ ನಾ ಕಂಡಂತೆ | 30/- |
| ಬೆಳಕಿನಲ್ಲಿ ಬದುಕುವುದು | 10/- |
| ಬೆಳಕು | 10/- |
| ದೈವಸಾಕ್ಷಾತ್ಕಾರಕ್ಕೆ ರಾಮಕೃಷ್ಣರ ಮಾರ್ಗದರ್ಶನ | 250/- |
| ಕಾವ್ಯಕಂಠ ವಸಿಷ್ಠ ಗಣಪತಿ ಮುನಿಗಳು | 100/- |
| ಆನೇಕಲ್ಲಿನ ಅಪರೂಪದ ವ್ಯಕ್ತಿಗಳು | 120/- |
| ಬೆಳಕಿನ ಶರೀರ ಮತ್ತು ಇತರ ವಾಸ್ತವಗಳು | 100/- |
| प्रकाशवाट (Marathi) | 150/- |
| आयगुरूजी (Marathi) | 100/- |
| ध्यान कसे करावे (Marathi) | 50/- |
| ध्यानयोग (Marathi) | 50/- |
| आत्म्याचे पृथ्वीवर अवतरण (Marathi) | 50/- |
| शंबला तत्त्वांचा अभ्यास (Marathi) | 50/- |
| एका आधुनिक ऋषीचे सूक्ष्मजगातील पराक्रम (Marathi) | 50/- |
| प्रकाशमय जीवन (Marathi) | 10/- |
| प्रकाश (Marathi) | 10/- |
| उच्चस्तरीय संवाद आणि इतर सत्ये (Marathi) | 100/- |
| गुरु–शिष्य संवाद (Marathi) | 60/- |
| ध्यान कैसे करे (Hindi) | 50/- |
| ध्यान-योग (Hindi) | 50/- |
| प्रकाश (Hindi) | 10/- |
| प्रकाशमय जीवन (Hindi) | 10/- |
| प्रकाश की ओर (Hindi) | 150/- |
| आत्मा का अवतरण (Hindi) | 50/- |
| தியானம் செய்வது எப்படி | 50/- |
| ஒளியின் வாயில்கள் | 200/- |
| தியான யோகம் | 50/- |
| ஆத்மாவின் அவரோகணம் | 50/- |
| நவீன ரிஷி ஒருவரின் சூஷ்ம சாகசங்கள் | 50/- |
| சம்பலா நியமங்களின் அப்பியாசங்கள் | 50/- |
| ధ్యానం చేయ్యడం ఎలా | 50/- |
| కాంతికి ద్వారములు | 100/- |

Published: 21st of Every Month. RNI. No. KARKAN/2003/13739 Regd. Postal Regn. No. KARN/BGE/1124/ 2017-2019
Date of posting Newsletter-25th or 27th or 29th of Every Month. Posted at Bangalore PSO, Bg-560026 No. of Pages-8



ಗುರೂಜಿ ಕೃಷ್ಣಾನಂದ (1939 - 2012)

### ಮಾನಸ ಫೌಂಡೇಶನ್ (ರಿ)

1988ರಲ್ಲಿ ಗುರೂಜಿ ಕೃಷ್ಣಾನಂದರಿಂದ ಸ್ಥಾಪನೆಯಾದ ಈ ಸಂಸ್ಥೆ ಜ್ಯೋತಿಕಾರ್ಯಕ್ಕೆ ಮೀಸಲಾಗಿದ್ದು, ತಪೋನಗರ ಮತ್ತು ಬೆಂಗಳೂರಿನಲ್ಲಿ ಧ್ಯಾನ ತರಗತಿಗಳನ್ನು ನಡೆಸುತ್ತದೆ.

### ಮಾನಸ

ಬೆಂಗಳೂರಿನಿಂದ ಇಪ್ಪತ್ತು ಕಿಲೋಮೀಟರ್ ದೂರದ ಚಿಕ್ಕಗುಬ್ಬಿ ಹಳ್ಳಿಯ ಬಳಿ ರೂಪುಗೊಳ್ಳುತ್ತಿರುವ ಧ್ಯಾನಾಭ್ಯಾಸಿಗಳ ಬಡಾವಣೆ. 1935ರಲ್ಲಿ ಅಮರರಿಗೆ ಇಲ್ಲಿ ಋಷಿಗಳ ಚಟುವಟಿಕೆಗಳ ಮತ್ತು ಭವಿಷ್ಯದಲ್ಲಿ ಸ್ಥಾಪನೆಯಾಗುವ ಬೆಳಕಿನ ನಗರದ ದರ್ಶನವಾಗಿತ್ತು. ವಿಶ್ವಚೇತನ ಮಂದಿರ, ಕುಂಡಲಿನಿ ಗೋಪುರ ಮತ್ತು ತಪೋವನ ಇಲ್ಲಿ ಧ್ಯಾನಮಾಡಲು ರೂಪುಗೊಂಡಿರುವ ವಿನೂತನ ಸ್ಥಳಗಳು. ತಪೋನಗರದ ಸುತ್ತಲೂ 'ಮಾನಸಿ' ಎಂಬ ವಿಭಿನ್ನ ಚೈತನ್ಯವಲಯವನ್ನು ನಿರ್ಮಿಸಿ, ಅದರಲ್ಲಿ ವಿಶೇಷ ಚೈತನ್ಯಗಳನ್ನು ಸಂಗ್ರಹಿಸಿಡಲಾಗಿದೆ.

### ಅಂತರ್ ಮಾನಸ

ಮಾನಸದ ಹುಟ್ಟು ಸ್ಥಳ. ಇದು ತಪೋನಗರದಿಂದ ಒಂದು ಕಿಲೋಮೀಟರ್ ದೂರದಲ್ಲಿರುವ ನಾಡಗೌಡ ಗೊಲ್ಲಹಳ್ಳಿಯ ಹತ್ತಿರ ಇದೆ. ಅಲ್ಲಿ ಗುರೂಜಿಯವರು 1987 ರಿಂದ 1992 ರವರೆಗೆ ವಾಸಮಾಡಿದ ಒಂದು ಗುಡಿಸಲು ಮತ್ತು ಇತರೆ ಕಟ್ಟಡಗಳಿವೆ.

### ಅಧ್ಯಯನ ಕೇಂದ್ರ

ಇದು ಆಧ್ಯಾತ್ಮಿಕ ಸತ್ಯಗಳ ಅಧ್ಯಯನಕ್ಕಾಗಿ ಅಂತರ್ ಮಾನಸದಲ್ಲಿ ಋಷಿಗಳ ಮಾರ್ಗದರ್ಶನದಲ್ಲಿರುವ ಒಂದು ವಿಶೇಷವಾದ ಅಧ್ಯಯನ ಕೇಂದ್ರ.

### ಜ್ಯೋತಿ ಪ್ರಾಜೆಕ್ಟ್

ಇದು ಮುಖ್ಯವಾಗಿ ಹಳ್ಳಿಯ ಮಕ್ಕಳಿಗೆ ಮೀಸಲಾದದ್ದು. ಅವರಿಗೆ ಶಾಲೆಯ ಪಾಠಗಳಲ್ಲಿ ನೆರವಾಗುವುದಲ್ಲದೆ ಶ್ಲೋಕಗಳು, ಶುಚಿತ್ವ, ಹಾಡುಗಳು, ಸಾಮಾನ್ಯಜ್ಞಾನ ಇತ್ಯಾದಿಗಳನ್ನು ಕಲಿಸಲಾಗುತ್ತದೆ. ಅಲ್ಲದೆ ಕಥೆಗಾರಿಕೆ, ಸಂಗೀತ ಮತ್ತು ಚಿತ್ರಕಲೆಗಳ ಮೂಲಕ ಅವರಲ್ಲಿನ ಸೃಜನಶೀಲತೆಯನ್ನು ವ್ಯಕ್ತಪಡಿಸಲು ಪ್ರೋತ್ಸಾಹಿಸಲಾಗುತ್ತದೆ.

### ಸಾರ್ವಜನಿಕರು

ಎಲ್ಲ ದಿನಗಳಲ್ಲೂ ಬೆಳಿಗ್ಗೆ 10ರಿಂದ 5ರ ನಡುವೆ ಧ್ಯಾನಮಾಡಲು ಇಲ್ಲಿಗೆ ಬರಬಹುದು.

### ವಿನಂತಿ

ದಯವಿಟ್ಟು ನಮ್ಮ ಸೇವಾಕಾರ್ಯಗಳಿಗೆ ನೆರವಾಗಿ. ('Manasa Foundation' ಹೆಸರಿನಲ್ಲಿ ಚೆಕ್/ಡಿಡಿ ಪಡೆಯಬಹುದು. 80–G ನಿಯಮದಡಿ ಆದಾಯ ತೆರಿಗೆಯ ರಿಯಾಯಿತಿ ಇದೆ.)

## ಸಾಧಕರ ಆಧ್ಯಾತ್ಮಿಕ ಅನುಭವಗಳು ಮತ್ತು ಅವರ ಪತ್ರಗಳಿಂದ ಆಯ್ದ ಭಾಗಗಳು

ಸಂ: ಶೋಭಾ ಕೆ. ರಾವ್; ಅನು: ಸ್ವರ್ಣಲತಾ

ಯಾವುದೇ ಮೋಹಕ್ಕೆ ಅಂಟಿಕೊಳ್ಳದೆ ಕೆಲಸ ಮಾಡಿದರೆ ಅದು ಅತ್ಯಂತ ಸುಂದರವಾಗಿರುತ್ತದೆ. ವಿವೇಕಯುತ ಜೀವನ ನಡೆಸುವುದು ಒಂದು ಕಲೆ.

ಗುರೂಜಿ ಹಾಗೂ ಅಮರರವರನ್ನು ನೆನೆದಾಕ್ಷಣ ನನ್ನ ಕಣ್ತುಂಬಿ ಬರುತ್ತದೆ. ನಾನು ಋಷಿಗಳೊಡನೆ ಮಾತನಾಡಲು ಕಷ್ಟ ಪಡುತ್ತಿದ್ದೇನೆ. ಆದರೆ ಅತಿ ಶೀಘ್ರದಲ್ಲೇ ಅವರನ್ನು ಭೇಟಿಮಾಡುವೆನೆಂಬ ನಂಬಿಕೆ ದೃಢವಾಗಿದೆ.

– ಹರೀಶ್.ಜಿ, ಬೆಂಗಳೂರು

ಕೆಲವು ತಿಂಗಳುಗಳ ಹಿಂದೆ ನನ್ನ ಕಿರುಬೆರಳು ಅತ್ಯಂತ ಆಳವಾಗಿ ಕತ್ತರಿಸಿತ್ತು, ವೈದ್ಯರೂ ಸಹ ಅದು ಕೂಡುವುದು ಅಸಾಧ್ಯವೆಂದು ತಿಳಿಸಿದ್ದರು. ನಾನು ಆ ಬೆರಳಿಗೆ ಬೆಳಕನ್ನು ಹರಿಸಿ ಅದು ಗುಣವಾಗಲೆಂದು ಋಷಿಗಳು ಮತ್ತು ಗುರೂಜಿಯವರನ್ನು ಪ್ರಾರ್ಥಿಸಿದೆ. ಮೂರನೆಯ ದಿನ ವೈದ್ಯರೇ ಅಚ್ಚರಿ ಪಡುವಂತೆ ಅದು ಗುಣಮುಖವಾಗಿತ್ತು. 'ಇದು ನಿಜವಾಗಿಯೂ ವಿಸ್ಮಯ,' ಎಂದು ಅವರು ಹೇಳಿದರು. ಇದು ಋಷಿಗಳು ಗುರೂಜಿಯವರು ಹಾಗೂ ಅಮರರವರಿಂದಲೇ ಸಾಧ್ಯವಾಯಿತೆಂಬುದು ನನಗೆ ತಿಳಿದಿದೆ.

– ಜಯಶ್ರೀ ವಾಸುದೇವ

ಅನೇಕ ಕೆಲಸಗಳನ್ನು ಮಾಡಲು, ಪುಸ್ತಕ ಓದುವುದರಿಂದಲೋ, ಮಾಸ್ಟರ್‌ಗಳ ವಿಡಿಯೋ ನೋಡುವುದರಿಂದಲೋ ಅಥವ ಅವರ ಪಾಠಗಳನ್ನು ಕೇಳುವುದರಿಂದಲೋ ಮುನ್ಸೂಚನೆಗಳು ದೊರೆತು ಎಲ್ಲಾ ಕೆಲಸಗಳೂ ಸುಗಮವಾಗಿ ನಡೆಯುತ್ತವೆ.

ಈಗ ನಾನು ಎಲ್ಲವೂ ಮತ್ತು ಎಲ್ಲರೂ ಬೆಳಕೇ ಎಂಬುದನ್ನು ಅರ್ಥಮಾಡಿಕೊಳ್ಳುತ್ತಿದ್ದೇನೆ. ಬೆಳಕು ನನಗೆ ಒಂದು ನಿರಂತರ ಸಂಗಾತಿಯಂತಾಗಿದೆ. ನನ್ನ ಜೀವನದ ಎಲ್ಲಾ ಘಟನೆಗಳಲ್ಲಿ ಬೆಳಕು ನನ್ನನ್ನು ಮಾರ್ಗದರ್ಶಿಸುತ್ತಿದೆ ಎಂಬುದಕ್ಕೆ ಲೆಕ್ಕವಿಲ್ಲದಷ್ಟು ಉದಾಹರಣೆಗಳಿವೆ.

– ಸಚಿನ್. ಕೆ. ಎನ್

ಇತ್ತೀಚೆಗೆ ನನ್ನ ದೇಹದಲ್ಲಿ ಅನೇಕ ಕೋಣೆಗಳು ಒಂದರೊಳಗೊಂದು ಇದ್ದಂತೆ ಚಿತ್ರಣವನ್ನು ನೋಡಿದೆ. ಅತ್ಯಂತ ಒಳಕೋಣೆಯಲ್ಲಿ ಬಹಳ ಪ್ರಕಾಶಮಾನವಾದ ಬಿಳಿ ಬೆಳಕಿನ ಕಣವಿತ್ತು. ಅದರ ಹೊರಕೋಣೆಗಳೆಲ್ಲವೂ ನೀಲಿ ಬೆಳಕಿನಿಂದ ತುಂಬಿತ್ತು. ನಾನು ಆಧ್ಯಾತ್ಮಿಕವಾಗಿ ಮೇಲೇರಿದಂತೆನಿಸಿತು.

– ಆಶಾ ಪಿರ್ಲಕ್

ಪ್ರಾಪಂಚಿಕ ಬಯಕೆಗಳು ಈಗ ನನಗೆ ಮುಖ್ಯವೇ ಅಲ್ಲ. ಅತ್ಯಂತ ಸಣ್ಣ ಸಣ್ಣ ವಿಷಯಗಳೂ ನನಗೆ ಸಂತೋಷಕೊಡುತ್ತವೆ. ಅವುಗಳು ನನಗೆ ಇನ್ನೂ ಹೆಚ್ಚಿನ ಪ್ರೀತಿ ಹಾಗೂ ಶಾಂತಿಯನ್ನು ಹರಡುವಂತೆ ಪ್ರಚೋದಿಸುತ್ತವೆ.

– ಅನುಪಮ ಮಹೇಶ್

ಸ್ವಯಂಚಾಲಿತ ಸ್ಥಿತಿಯಲ್ಲಿ ಋಷಿಗಳು ನನ್ನ ಜೀವನವನ್ನು ಇಟ್ಟಿರುವಂತೆನಿಸುತ್ತಿದೆ. ನಾನು ಯುಎಸ್‌ಗೆ ಬಂದ ನಂತರವೂ ನಾನೆಂದುಕೊಂಡಿದ್ದ ತೊಂದರೆಗಳಾವುವೂ ಎದುರಾಗಲೇ ಇಲ್ಲ. ಒಂದು ಊರಿನಿಂದ ಮತ್ತೊಂದು ಊರಿಗೆ ಪ್ರಯಾಣವು ಅತ್ಯಂತ ಸುಲಭವಾಗಿ ನಡೆಯಿತು. ನಮ್ಮ ಸಂಸಾರದ ಕೆಲವು ಸಮಸ್ಯೆಗಳೂ ದೂರವಾದಂತೆನಿಸಿತು. ನಾನು ಬೆಳಕಿಗೆ ಹಾಗೂ ಋಷಿಗಳಿಗೆ ಸಂಪೂರ್ಣ ಶರಣಾಗಿದ್ದೇನೆ. ಈಗ ಜೀವನದಲ್ಲಿ ಏನೇ ಬಂದರೂ ಅದನ್ನು ಅತ್ಯಂತ ಸುಲಭವಾಗಿ ಒಪ್ಪಿಕೊಳ್ಳುತ್ತೇನೆ.

– ನಂದಿತಾ ಪಟೇಲ್

ಯಾವುದೋ ಒಂದು ವಿಷಯದ ಬಗ್ಗೆ ನನ್ನ ಯಜಮಾನರೊಂದಿಗೆ ಭಿನ್ನಾಭಿಪ್ರಾಯವಿದ್ದು ಅದು ಘರ್ಷಣೆಗೆ ಕಾರಣಯಾಯಿತು. ಮಲಗುವ ಮೊದಲು ನಾನು ಋಷಿಗಳನ್ನು ಮಾರ್ಗದರ್ಶಿಸುವಂತೆ ಬೇಡಿದೆ. ಮಾರನೆಯ ದಿನ ಬೆಳಿಗ್ಗೆ ಎದ್ದಾಗ ವಿಷಯವನ್ನು ಸಂಪೂರ್ಣವಾಗಿ ಬೇರೆ ಕೋನದಿಂದ ನೋಡಿದೆ ಮತ್ತು ಭಿನ್ನಾಭಿಪ್ರಾಯವನ್ನು ಬಗೆಹರಿಸಲು ಸಾಧ್ಯವಾಯಿತು. ಗುರುಜಿಯವರದು ದೈವೀ ಪ್ರೀತಿ. ಈ ಮಾರ್ಗ ಸಿಕ್ಕಿದ್ದಕ್ಕೆ ನಾನು ಕೃತಜ್ಞಳಾಗಿದ್ದೇನೆ.

– ಒಬ್ಬ ಸಾಧಕಿ

ಇತ್ತೀಚೆಗೆ ಒಂದು ದಿನ ನಾನು ಕೆಲಸ ಮುಗಿಸಿ ಹಿಂತಿರುಗುತ್ತಿದ್ದಾಗ ನನ್ನ ಕಾರಿನ ಚಕ್ರ ಹಳ್ಳವೊಂದರಲ್ಲಿ ಸಿಕ್ಕಿಹಾಕಿಕೊಂಡಿತು. ಆಗ ಮಧ್ಯ ವಯಸ್ಕ ವ್ಯಕ್ತಿಯೊಬ್ಬರು ಹತ್ತಿರ ಬಂದು ಮುಗುಳ್ನಗುತ್ತಾ "ಪಕ್ಕಕ್ಕೆ ಬನ್ನಿ, ನನ್ನ ಕೈಲೇನಾದರೂ ಸಹಾಯ ಮಾಡಲು ಸಾಧ್ಯವೇ ಎಂದು ನೋಡುತ್ತೇನೆ," ಎಂದು ಹೇಳುತ್ತಾ ಚಾಲಕನ ಸೀಟಿನಲ್ಲಿ ಕುಳಿತು, ಕೆಲವು ವ್ಯಕ್ತಿಗಳನ್ನು ಕರೆದು, ಅದನ್ನು ಹಳ್ಳದಿಂದ ಹೊರತೆಗೆದು ರಸ್ತೆಗೆ ತಂದರು. ನಾನು ಅವರಿಗೆ ವಂದನೆಗಳನ್ನು ಸಲ್ಲಿಸಿದಾಗ ಅವರು ಮುಗುಳ್ನಗುತ್ತಾ ಹೊರಟು ಹೋದರು. ಹೀಗೆ ನನಗೆ ಕಷ್ಟದ ಸಮಯದಲ್ಲಿ ಅಪರಿಚಿತರಿಂದ ಸಹಾಯ ದೊರೆಯುತ್ತಿರುವುದು ಎರಡನೆಯ ಸಾರಿ. ಋಷಿಗಳು ನಮ್ಮನ್ನು ಕಾಪಾಡುವ ರೀತಿ ಇದೇ.

ನಾನು ಗುರುಪೂರ್ಣಿಮೆಯ ದಿನದಂದು ಮಾನಸಕ್ಕೆ ಭೇಟಿ ನೀಡಿದ್ದು ನನ್ನ ಅದೃಷ್ಟ. ನನಗೆ ಮಂಡಿ ನೋವಿದ್ದುದರಿಂದ ಬಹಳ ಸಮಯ ಕೆಳಗೆ ಕೂರಲು ಸಾಧ್ಯವಾಗುತ್ತದೆಯೇ ಎಂಬ ಹಿಂಜರಿಕೆಯಿತ್ತು. ಆದರೆ ಅಂತರಮಾನಸದಲ್ಲಿ, ಗುರೂಜಿಯವರ ಸಮಾಧಿಯ ಬಳಿಯಲ್ಲಿ ಹಾಗೂ ಧ್ಯಾನದ ತರಗತಿಯಲ್ಲಿ, ಅನೇಕ ಜನರಿದ್ದರೂ ನನಗೆ ಕುಳಿತುಕೊಳ್ಳಲು ಕುರ್ಚಿಯು ಸಿಕ್ಕಿತು. ಗುರೂಜಿಯವರಿಗೆ ನನ್ನ ಮಂಡಿನೋವಿನ ಅರಿವಿದ್ದಿದ್ದರಿಂದ ಆರಾಮವಾಗಿ ಧ್ಯಾನ ಮಾಡಲು ಅನುಕೂಲ ಮಾಡಿಕೊಟ್ಟರು.

– ವಿನಮ್ರ ಲೊಂಗಾನಿ

ತಪೋವಾಣಿ, ಕನ್ನಡ ಮಾಸಪತ್ರಿಕೆ, ವಾರ್ಷಿಕ ಚಂದಾ : ರೂ.300/–
ಸಂಪಾದಕರು, ಪ್ರಕಾಶಕರು ಮತ್ತು ಮುದ್ರಕರು : ಶ್ಯಾಮಲಾ ದೇವಿ, ತಪೋನಗರ, ಚಿಕ್ಕಗುಬ್ಬಿ, (ಹೆಣ್ಣೂರು–ಬಾಗಲೂರು ರೋಡ್) ಬೆಂಗಳೂರು ಅರ್ಬನ್ – 560 077. ಮಾನಸ ಫೌಂಡೇಶನ್ (ರಿ.) ಪರವಾಗಿ.
ಮಾಲೀಕರು : ಮಾನಸ ಫೌಂಡೇಶನ್ (ರಿ.), ತಪೋನಗರ, ಚಿಕ್ಕಗುಬ್ಬಿ, ಬೆಂಗಳೂರು ಅರ್ಬನ್ – 560 077
ಪ್ರಕಾಶನ ಸ್ಥಳ ಮಾನಸ ಫೌಂಡೇಶನ್ (ರಿ.), ತಪೋನಗರ, ಚಿಕ್ಕಗುಬ್ಬಿ, ಬೆಂಗಳೂರು ಅರ್ಬನ್ – 560 077
ಮುದ್ರಣ ಸ್ಥಳ : ಆರ್ಟ್ ಪ್ರಿಂಟ್, 719/ಎ, ವೆಸ್ಟ್ ಆಫ್ ಕಾರ್ಡ್ ರೋಡ್, 2ನೇ ಸ್ಟೇಜ್, ರಾಜಾಜಿನಗರ, ಬೆಂಗಳೂರು–560086. ಫೋನ್: 23359992
ಸಂಪಾದಕರು : ಶ್ಯಾಮಲಾ ದೇವಿ